ವಿಜಯಪುರ | ಸಂಪುಟ 04 | ಸಂಚಿಕೆ 174 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಬುಧವಾರ, ಸೆಪ್ಟೆಂಬರ್, 02, 2026

"ಆರು ಬಾರಿ ಶಾಸಕರಾಗಿ ಸಚಿವರಾದ್ರೂ ರಾಯರೆಡ್ಡಿಗೆ ಸಮಾಧಾನ ಇಲ್ಲ, ಎಲ್ಲೂ ಸಿಗದ ಸುಖ ಇಸ್ಲಾಂ ಧರ್ಮದಲ್ಲಿ ಸಿಗುತ್ತದೆ ಎಂದು ಅವರು ಅಂದುಕೊಂಡಿರಬಹುದು. ಸತ್ತ ಮೇಲೆ 72 ಕನ್ಯೆಯರು ಸಿಗಬಹುದು ಎಂದು ಅಂದ್ಕೊಂಡಿದ್ದಾರಾ?"



■ ಪ್ರತಾಪ್ ಸಿಂಹ
ಮಾಜಿ ಸಂಸದರು

## ನಿಷ್ಕ್ರಿಯ ಸಹಕಾರ ಸಂಘಗಳ ನೋಂದಣಿ ರದ್ದತಿ ಪ್ರಕ್ರಿಯೆ ಆರಂಭ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ತಾಲೂಕಿನಲ್ಲಿ ಹಲವು ವರ್ಷಗಳಿಂದ ಕಾರ್ಯನಿರ್ವಹಿಸದೆ ನಿಷ್ಕ್ರಿಯವಾಗಿರುವ ವಿವಿಧ ಸಹಕಾರ ಸಂಘಗಳನ್ನು ಸಮಾಪನಗೊಳಿಸುವ ಪ್ರಕ್ರಿಯೆ ಆರಂಭವಾಗಿದ್ದು, ಈ ಸಂಬಂಧ ಆಕ್ಷೇಪಣೆ ಸಲ್ಲಿಸಲು ಸಾರ್ವಜನಿಕರು ಹಾಗೂ ಸದಸ್ಯರಿಗೆ 7 ದಿನಗಳ ಕಾಲಾವಕಾಶ ನೀಡಲಾಗಿದೆ.

ಈ ಸಂಘಗಳಿಗೆ ಸಂಬಂಧಿಸಿದಂತೆ ಸದಸ್ಯರು, ಸಾರ್ವಜನಿಕರು ಅಥವಾ ಇತರೆ ಹಕ್ಕುದಾರರು ತಮ್ಮ ಹಕ್ಕು-ಬಾಧ್ಯತೆಗಳು ಹಾಗೂ ಕೊಡತಕ್ಕ-ಬರತಕ್ಕ ಬಾಬುಗಳ ಕುರಿತು ಮಾಹಿತಿ ಅಥವಾ ಆಕ್ಷೇಪಣೆಗಳಿದ್ದರೆ ಅಗತ್ಯ ದಾಖಲೆಗಳೊಂದಿಗೆ ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು ಸಮಾಪನಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ನಿರೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ, ವಿಜಯಪುರ ಉಪವಿಭಾಗ, ವಿಜಯಪುರ. ಈ ವಿಳಾಸಕ್ಕೆ ಕಳುಹಿಸಬಹುದಾಗಿದೆ.

ಸಮಾಪನೆಗೊಳ್ಳಲಿರುವ ಸಹಕಾರ ಸಂಘಗಳ ವಿವರ: ರಕ್ಷಾ ಪತ್ತಿನ ಸಹಕಾರ ಸಂಘ, ಬಂಜಾರಾ ಮತ್ತು ಮಹಿಳಾ ಕೈಗಾರಿಕಾ ಸಹಕಾರ ಸಂಘ, ವಿದ್ಯಾನಗರ ಗೃಹ ನಿರ್ಮಾಣ ಸಹಕಾರ ಸಂಘ, ಹುಣಶ್ಯಾಳ ಹಾಲು ಉತ್ಪಾದಕರ ಸಹಕಾರ ಸಂಘ ,ರೇಣುಕಾ ಪತ್ತಿನ ಸಹಕಾರ ಸಂಘ, ವಿಜಯಪುರ ಶಹರ ಟಿನ್ ತಗಡಿನ ಸಾಮಾನುಗಳ ತಯಾರಕರ ಕೂಲಿಕಾರರ ಸಹಕಾರ ಸಂಘ,

ಕಲ್ಪವೃಕ್ಷ ಗ್ರಾಹಕರ ಸಹಕಾರ ಸಂಘ, ಸತ್ಕಾರ ಪತ್ತಿನ ಸಹಕಾರ ಸಂಘ ಹಾಗೂ ಭಾರತ ಕೋಳಿ ಸಾಕಾಣಿಕೆ ಮತ್ತು ಮಾರಾಟಗಾರರ ಸಹಕಾರ ಸಂಘ ಶಿವಣಗಿ ವಿವಿಧೋದ್ದೇಶಗಳ ಸಹಕಾರ. ನಿಗದಿತ 7 ದಿನಗಳೊಳಗೆ ಯಾವುದೇ ಆಕ್ಷೇಪಣೆಗಳು ಬರದಿದ್ದಲ್ಲಿ, ನಿಯಮಾನುಸಾರ ಸಂಘಗಳ ನೋಂದಣಿ ರದ್ದುಪಡಿಸಲಾಗುತ್ತದೆ. ಬಳಿಕ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಸಮಾಪನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗಣೇಶ ವಿಸರ್ಜನೆಗೆ ಶಾಶ್ವತ ಹೊಂಡ ನಿರ್ಮಾಣಕ್ಕೆ ನಿರ್ಧಾರ

### ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ತಾಸಬಾವಡಿ ಆವರಣದಲ್ಲಿ ಗಣೇಶ ವಿಸರ್ಜನೆಗೆ ಶಾಶ್ವತವಾಗಿ 30*80 ಅಳತೆಯ ಹೊಂಡ ನಿರ್ಮಾಣ ಮಾಡಲು ಪಾಲಿಕೆಯ ಆಯಕ್ತರಿಗೆ ಖಡಕ್ ಸೂಚನೆ ನೀಡಿದ ನಂತರ ಅದಕ್ಕೆ ಒಪ್ಪಿದರು ಎಂದು ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ರವರು ತಿಳಿಸಿದ್ದಾರೆ.

ಮಂಗಳವಾರ ಮಹಾನಗರ ಪಾಲಿಕೆ ಆಯುಕ್ತರಾದ ವಿಜಯಕುಮಾರ್ ಮೆಕ್ಕಳಕಿ ಅವರನ್ನು ಕರೆಯಿಸಿ, ನಗರದ ತಾಸಬಾವಡಿಯಲ್ಲಿ ಅನೇಕ ವರ್ಷಗಳಿಂದ ಕುಂಭ ಪೂಜೆ, ಮರಗಮ್ಮ ದೇವಿ ಜಾತ್ರೆಗೆ ಮಡಿ ನೀರು ತರುವುದು ಹಾಗೂ ಗಣೇಶ ವಿಸರ್ಜನೆ ಮಾಡುತ್ತ ಬರಲಾಗಿದೆ. ಇಂತಹ ಹಿಂದುಗಳ ಪವಿತ್ರ ಹಬ್ಬದ ಸಂದರ್ಭದಲ್ಲಿ ಭಕ್ತರು ಯಾವುದೇ ಆತಂಕಪಡುವ ಅಗತ್ಯವಿಲ್ಲ. ಯಾವುದೇ ಗೊಂದಲ ಸೃಷ್ಟಿ ಮಾಡುವವರ ಮಾತಿಗೆ ಕಿವಿಗೊಡಬೇಡಿ ಎಂದು ಶಾಸಕರು ಸಲಹೆ ನೀಡಿದ್ದಾರೆ.

ಅನೇಕ ದಶಕಗಳಿಂದ ನಡೆದುಕೊಂಡು ಬಂದ ಗಣೇಶ ವಿಸರ್ಜನೆಯನ್ನು ತಾಸಬಾವಡಿ ಬಳಿ ತಪ್ಪಿಸಬೇಕೆಂಬ ಯತ್ನ ನಡೆಸಲಾಗುತ್ತಿತ್ತು. ಅದರ ಭಾಗವಾಗಿಯೇ ಪ್ರಸಕ್ತ ವರ್ಷ ಕೇವಲ 30*30 ಅಳತೆಯ ಸಣ್ಣ ಕೃತಕ ಹೊಂಡ ಸಂಬಂಧವಿಲ್ಲದವರ ಜೊತೆಗೂಡಿ, ಯಾಕೆ ಈ ಗೊಂದಲ ಸೃಷ್ಟಿ ಮಾಡುತ್ತಿದ್ದೀರಿ? ಹೊಂಡದ ಅಳತೆ ಕಡಿಮೆ ಮಾಡಿದರೆ, ಹೋರಾಟ ಮಾಡಬೇಕಾಗುತ್ತದೆ ಎಂದು ಆಯುಕ್ತರಿಗೆ ಎಚ್ಚರಿಸಿ, ಅಲ್ಲಿ ಶಾಶ್ವತವಾಗಿ ಗಣೇಶ ವಿಸರ್ಜನೆಗೆ ವ್ಯವಸ್ಥೆ ಮಾಡುವ ಅಗತ್ಯವಿದೆ. ಆದ್ದರಿಂದ ಗಣೇಶ ಮಂಡಳಿಗಳ ಮತ್ತು ನಾಗರಿಕರ ಭಾವನೆಗೆ ಧಕ್ಕೆಯಾಗದಂತೆ, 30*80 ಅಳತೆಯ ಹೊಂಡ ನಿರ್ಮಾಣ ಮಾಡಬೇಕೆಂದು ಖಡಕ್ ಸೂಚನೆ ನೀಡಿದಲ್ಲದೆ, ಅಲ್ಲಿಯೇ ಜಿಲ್ಲಾಧಿಕಾರಿಗಳಿಗೆ ಕರೆ ಮಾಡಿ ವಿವರಿಸಿದ ನಂತರ, ತಾಸಬಾವಡಿ ವೀಕ್ಷಣೆ ಮಾಡುವ ಪ್ರವಾಸಿಗರಿಗಾಗಿ ಇದ್ದ ಪಾದಚಾರಿ ಮಾರ್ಗದ ಅಗಲವನ್ನು ಕಡಿಮೆ ಮಾಡಿ, ಹೊಂಡದ ಉದ್ದಗಲವನ್ನು ಹೆಚ್ಚಿಸುವಂತೆ ತಿಳಿಸಿದರು.

ಇದಕ್ಕೆ ಒಪ್ಪಿದ ಪಾಲಿಕೆ ಆಯುಕ್ತರು, ದೊಡ್ಡದು ಮಾಡುವುದಾಗಿ ತಿಳಿಸಿದ್ದಾರೆ. ಕಾರಣ ಗಣೇಶ ನಿರ್ಮಿಸಲು ನಿರ್ಧರಿಸಿ, ನನ್ನ ಹೆಸರು ಕೆಡಿಸಲು ಪ್ರಯತ್ನಿಸುತ್ತಿದ್ದರು. ಅಲ್ಲದೆ, ಅನೇಕ ದಿನಗಳಿಂದ ವಿನಾಕಾರಣ ಗೊಂದಲ ಸೃಷ್ಟಿಸಲಾಗಿತ್ತು. ಈ ವಿಷಯ ನನ್ನ ಗಮನಕ್ಕೂ ಬಂದಿದಲ್ಲದೆ, ಅನೇಕ ಗಜಾನನ ಮಂಡಳಿ ಪದಾಧಿಕಾರಿಗಳು, ಗಣೇಶಭಕ್ತರು, ನನ್ನನ್ನು ಸಂಪರ್ಕಿಸಿ ಯಾವುದೇ ಕಾರಣಕ್ಕೂ ತಾಸಬಾವಡಿ ಬಳಿ ಗಣೇಶ ವಿಸರ್ಜನೆ ಮಾಡುವುದನ್ನು ನಿಲ್ಲಿಸಬಾರದೆಂದು ಮನವಿ ಮಾಡಿಕೊಂಡಿದ್ದರು. ತಕ್ಷಣ ಪಾಲಿಕೆಯ ಆಯುಕ್ತರನ್ನು ಕರೆಯಿಸಿ, ಜಿಲ್ಲಾಧಿಕಾರಿಗಳಿಗೆ ಮನವರಿಕೆ ಮಾಡಲಾಯಿತು. ಹೀಗಾಗಿ 30*30 ಅಳತೆಯ ಬದಲಾಗಿ, 30*80 ಅಳತೆಯ ಹೊಂಡ ನಿರ್ಮಾಣ ಮಾಡಿ, ಸಣ್ಣ ಮತ್ತು ದೊಡ್ಡ ಗಣೇಶ ಮೂರ್ತಿಗಳ ವಿಸರ್ಜನೆಗೆ ಅನುಕೂಲಕ್ಕೆ ಶಾಶ್ವತ ಹೊಂಡ ನಿರ್ಮಾಣ ಮಾಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.

## ದಲಿತ ಚರ್ಮಕಾಯಕ ವೃತ್ತಿದಾರರಿಗೆ ಶಾಶ್ವತ ಮಳಿಗೆ ಕಲ್ಪಿಸಲು ಆಗ್ರಹ



■ ಉದಯರಶ್ಮಿ ದಿನಪತ್ರಿಕೆ

### ಅರ್ಹ ಕುಟುಂಬಗಳಿಗೆ ಆದ್ಯತೆಯ ಮೇರೆಗೆ ಮಳಿಗೆ ಹಂಚಿಕೆ ಮಾಡುವಂತೆ ಭೀಮ್ ರಾಜ್ಯ ದಲಿತ್ ಸೇವಾ ಸಮಿತಿ ಮನವಿ

ವಿಜಯಪುರ: ನಗರದ ದಲಿತ ಸಮುದಾಯದ ಚರ್ಮಕಾಯಕ ವೃತ್ತಿದಾರರಿಗೆ ಶಾಶ್ವತವಾಗಿ ವ್ಯಾಪಾರ ನಡೆಸಲು ಮಳಿಗೆಗಳನ್ನು ಒದಗಿಸುವಂತೆ ಒತ್ತಾಯಿಸಿ ಭೀಮ್ ರಾಜ್ಯ ದಲಿತ್ ಸೇವಾ ಸಮಿತಿ (ರಿ.) ವಿಜಯಪುರ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧಿಕಾರಿಗಳು, ವಿಜಯಪುರ ಮಹಾನಗರ ಪಾಲಿಕೆ ಆಯುಕ್ತರು ಹಾಗೂ ವಿಜಯಪುರ ನಗರ ಶಾಸಕರಿಗೆ ಮನವಿ ಸಲ್ಲಿಸಲಾಯಿತು.

ವಿಜಯಪುರ ನಗರದಲ್ಲಿ ಚರ್ಮಕಾಯಕ ವೃತ್ತಿಯನ್ನು ಅವಲಂಬಿಸಿಕೊಂಡು ಜೀವನ ನಡೆಸುತ್ತಿರುವ 9 ಅರ್ಹ ಕುಟುಂಬಗಳಿಗೆ ಶಾಶ್ವತ ಮಳಿಗೆ ಒದಗಿಸುವ ವಿಚಾರ ಹಲವು ವರ್ಷಗಳಿಂದ ಬಾಕಿ ಉಳಿದಿದೆ. ಸ್ವಂತ ಮಳಿಗೆಗಳಿಲ್ಲದೆ ಈ ಕುಟುಂಬಗಳು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದು, ತಮ್ಮ ಸಾಂಪ್ರದಾಯಿಕ ವೃತ್ತಿಯನ್ನು ಮುಂದುವರಿಸಲು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಸಂಘಟನೆ ತಿಳಿಸಿದೆ.

ಸರ್ಕಾರಿ ಪ್ರೌಢಶಾಲೆಯ ಕಾಂಪೌಂಡ್ ಸಮೀಪ ಮಳಿಗೆಗಳನ್ನು ನೀಡುವುದಾಗಿ ತಿಳಿಸಿ ಫಲಾನುಭವಿಗಳಿಂದ ಹಣ ಪಾವತಿಸಿಕೊಳ್ಳಲಾಗಿತ್ತು. ಆದರೆ ಹಲವು ವರ್ಷಗಳು ಕಳೆದರೂ ಶಾಶ್ವತ ಮಳಿಗೆಗಳು ದೊರೆಯದೆ ಸಮಸ್ಯೆ ಮುಂದುವರಿದಿದೆ ಎಂದು ಸಂಘಟನೆ ಆರೋಪಿಸಿದೆ.

ಈ ಹಿನ್ನೆಲೆಯಲ್ಲಿ ಬಬಲೇಶ್ವರ ನಾಕಾದ ವಾಣಿಜ್ಯ ಮಳಿಗೆಗಳಲ್ಲಿ ಅವರಿಗೆ ಆದ್ಯತೆ ನೀಡಲು ಎಂದು ಭೀಮ್ ರಾಜ್ಯ ದಲಿತ್ ಸೇವಾ ಸಮಿತಿ ಆಗ್ರಹಿಸಿದೆ.

ಈ ವೇಳೆ ಸಮಿತಿ ರಾಜ್ಯಾಧ್ಯಕ್ಷ ಅಪ್ಪುರಾಜ್ ನಿಮಾದಾರ, ರಾಜ್ಯ ಪ್ರಧಾನ ಕಾರ್ಯದರ್ಶಿ ಸೋಮಶೇಖರ ಕಬಾಡೆ, ರಾಜ್ಯ ಉಪಾಧ್ಯಕ್ಷ ವಿಜಯಕುಮಾರ ನಿಮಾದಾರ, ರಾಜ್ಯ ಮಹಿಳಾ ಅಧ್ಯಕ್ಷೆ ನೀಲಾಂಬಿಕಾ ಕಟ್ಟಿಮನಿ, ಜಿಲ್ಲಾಧ್ಯಕ್ಷ ನಾಗರಾಜ, ಪದಾಧಿಕಾರಿಗಳಾದ ಕಿರಣಕುಮಾರ ಅಲಿಯಾಬಾದ, ರಾಘವೇಂದ್ರ ಕಾಸೆ, ಸಲ್ಮಾ ಮೈರಾಗೋಳ, ನೀಲಮ್ಮ ಗಡ್ಡಿ, ಶೋಭಾ ರಾಠೋಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಮುಡ ನಿವೇಶನ ಹಂಚಿಕೆ ಪ್ರಕರಣಕ್ಕೆ ಹೊಸ ತಿರುವು। 'ಬಿ' ರಿಪೋರ್ಟ್ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ ಇಡಿ

# ಮಾಜಿ ಸಿಎಂ ಸಿದ್ದರಾಮಯ್ಯಗೆ ಮತ್ತೆ 'ಮುಡಾ' ಸಂಕಷ್ಟ!

■ ಉದಯರಶ್ಮಿ ದಿನಪತ್ರಿಕೆ



ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬ ಸದಸ್ಯರು ಭಾಗಿಯಾಗಿದ್ದಾರೆ ಎನ್ನಲಾದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನಿವೇಶನ ಹಂಚಿಕೆ ಪ್ರಕರಣ ಹೊಸ ತಿರುವು ಪಡೆದುಕೊಂಡಿದೆ.

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ಸಲ್ಲಿಸಿದ ಬಿ ರಿಪೋರ್ಟ್ ಪ್ರಶ್ನಿಸಿ ಜಾರಿ ನಿರ್ದೇಶನಾಲಯ (ಇಡಿ) ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಬಿ ರಿಪೋರ್ಟ್ ನಲ್ಲಿ ಹಲವು ಅಂಶಗಳನ್ನು ಲೋಕಾಯುಕ್ತ ತನಿಖಾಧಿಕಾರಿಗಳು ಪರಿಗಣಿಸಿಲ್ಲ. ಇಡಿ ತನಿಖೆಯಲ್ಲಿ ಬೆಳಕಿಗೆ ಬಂದ ಅಂಶಗಳನ್ನು ಪರಿಗಣಿಸಿಲ್ಲ. ಕಾನೂನು ಬಾಹಿರ ಡಿನೋಟಿಫಿಕೇಷನ್ ಬಗ್ಗೆ ತನಿಖೆ ಸಮರ್ಪಕವಾಗಿಲ್ಲ. ಭೂ ಪರಿವರ್ತನೆ ಕಾನೂನುಬಾಹಿರವೆಂಬುದನ್ನು ಪರಿಗಣಿಸಿಲ್ಲ ಎಂದು ಜಾರಿ ನಿರ್ದೇಶನಾಲಯದ ಪರ ಎಎಸ್‌ಜಿ ಅರವಿಂದ್ ಕಾಮತ್ ವಾದ ಮಂಡಿಸಿದ್ದಾರೆ.

ವಾದ ಆಲಿಸಿದ ಹೈಕೋರ್ಟ್ ಏಕಸದಸ್ಯ ಪೀಠ, ವಿಚಾರಣೆಯನ್ನು ನಾಳೆ ಮಧ್ಯಾಹ್ನ 2.30ಕ್ಕೆ ಮುಂದೂಡಿದೆ.

2025ರ ಫೆಬ್ರವರಿ 12ರಂದು ಮೈಸೂರು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ, ಬೆಂಗಳೂರಿನ 82ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯಕ್ಕೆ(ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ) ಬಿ ರಿಪೋರ್ಟ್ ಸಲ್ಲಿಸಿದ್ದರು. ಅದನ್ನು ಅಂಗೀಕರಿಸಿ ವಿಶೇಷ ನ್ಯಾಯಾಲಯ 2026ರ ಜನವರಿ 28ರಂದು ಆದೇಶ ಹೊರಡಿಸಿದೆ.

ಆದರೆ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಸಲ್ಲಿಸಿರುವ 'ಬಿ' ರಿಪೋರ್ಟ್ ಅನ್ನು ಪಡೆದು ಪರಿಶೀಲಿಸಬೇಕು ಮತ್ತು ಅದನ್ನು ಅಂಗೀಕರಿಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು. ಅಲ್ಲದೆ, ಸ್ವತಂತ್ರ ತನಿಖಾ ಸಂಸ್ಥೆಗೆ ಪ್ರಕರಣದ ತನಿಖೆ ವರ್ಗಾಯಿಸಬೇಕು. ತನಿಖೆ ನಡೆಸಿ ಹೊಸದಾಗಿ ವರದಿ ಸಲ್ಲಿಸಲು ಸ್ವತಂತ್ರ ತನಿಖಾ ಸಂಸ್ಥೆಗೆ ನಿರ್ದೇಶಿಸಬೇಕು ಎಂದು ಸಾಮಾಜಿಕ ಕಾರ್ಯಕರ್ತೆ ಸ್ನೇಹಮಯ ಕೃಷ್ಣ ಕೋರಿದ್ದರು. ಆದ್ರೆ, ಇದೀಗ ಇದೇ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ ಸಹ ಹೈಕೋರ್ಟ್ ಮೆಟ್ಟಿಲೇರಿದ್ದು, ಪ್ರಕರಣವು ಈಗ ಹೊಸ ಕಾನೂನು ತಿರುವು ಪಡೆದಿದೆ.

## ಸಮಾಪನೆಗೊಂಡ 8 ಸಹಕಾರ ಸಂಘಗಳ ನೋಂದಣಿ ರದ್ದತಿಗೆ ಆಕ್ಷೇಪಣೆಗೆ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ತಾಲೂಕಿನಲ್ಲಿ ಹಲವು ವರ್ಷಗಳಿಂದ ಕಾರ್ಯನಿರ್ವಹಿಸದೆ ಸ್ಥಗಿತಗೊಂಡಿರುವ 8 ಸಹಕಾರ ಸಂಘಗಳ ನೋಂದಣಿ ರದ್ದುಪಡಿಸಲು ನಿರ್ಧರಿಸಲಾಗಿದ್ದು, ಈ ಕುರಿತು ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನಿಸಲಾಗಿದೆ.

ಈ ಸಂಘಗಳು ಬೈಲಾದಂತೆ ಕಾರ್ಯನಿರ್ವಹಿಸದೆ ಸ್ಥಗಿತಗೊಂಡ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು ಇವುಗಳನ್ನು ಈಗಾಗಲೇ ಸಮಾಪನೆಗೊಳಿಸಿ ಆದೇಶಿಸಿದ್ದಾರೆ. ಈ ಸಂಘಗಳು ನೋಂದಾಯಿತ ವಿಳಾಸದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಹಾಗೂ ಆಡಳಿತ ಮಂಡಳಿ, ಕಾರ್ಯದರ್ಶಿಗಳ ವಿವರ ಮತ್ತು ಲೆಕ್ಕ ಪರಿಶೋಧನಾ ಮಾಹಿತಿ ಲಭ್ಯವಿಲ್ಲ ಎಂದು ಸಮಾಪನಾಧಿಕಾರಿಗಳು ತಿಳಿಸಿದ್ದಾರೆ. ಈ ಸಂಘಗಳಿಂದ ಸಾರ್ವಜನಿಕರಿಗೆ ಅಥವಾ ವ್ಯಕ್ತಿಗಳಿಗೆ ಯಾವುದೇ ಕೊಡತಕ್ಕ ಅಥವಾ ಬರತಕ್ಕ ಬಾಕಿಗಳಿದ್ದಲ್ಲಿ, ಸೂಕ್ತ ದಾಖಲೆಗಳೊಂದಿಗೆ 7 ದಿನಗಳೊಗಾಗಿ ವಿಜಯಪುರ ಉಪ ವಿಭಾಗದ ಸಹಾಯಕ ನಿಬಂಧಕರ ಕಚೇರಿಯ ಸಮಾಪನಾಧಿಕಾರಿಗಳು,ಸಹಕಾರ ಸಂಘಗಳ ನಿರೀಕ್ಷಕರನ್ನು ಸಂಪರ್ಕಿಸಬಹುದಾಗಿದೆ.

ನೋಂದಣಿ ರದ್ದತಿಗೊಳಗಾದ ಸಂಘಗಳ ವಿವರ: ಸುಹಾಗ ಪ್ರಾಥಮಿಕ ಗ್ರಾಹಕರ ಸಹಕಾರ ಸಂಘ ವಿಜಯಪುರ ಬಂಜಾರಾ ಗೃಹ ನಿರ್ಮಾಣ ಸಹಕಾರ ಸಂಘ ಹೆಗಡಿಹಾಳ ಗೃಹ ನಿರ್ಮಾಣ ಸಹಕಾರ ಸಂಘ ಲೋಹಗಾಂವ ಎಲ್.ಟಿ. ಆಶಾದೀಪ ವಿವಿಧೋದ್ದೇಶಗಳ ಸಹಕಾರ ಸಂಘ ವಿಜಯಪುರ ಶ್ರೀ ರೇಣುಕಾ ಖಾದಿ ಗ್ರಾಮೋದ್ಯೋಗ ವಿವಿಧೋದ್ದೇಶಗಳ ಸಹಕಾರ ಸಂಘ ದರ್ಗಾ ಕರ್ನಾಟಕ ಗ್ರಾಮೀಣ ಅಲ್ಪಸಂಖ್ಯಾತರ ಪತ್ತಿನ ಸಹಕಾರ ಸಂಘ , ವಿಜಯಪುರ ಜಮುನಾ ವಿವಿಧೋದ್ದೇಶಗಳ ಸಹಕಾರ ಸಂಘ ವಿಜಯಪುರ ಗೀತಾ ಪ.ಜಾ.ಪ.ಪಂ ಮಹಿಳಾ ಸಹಕಾರಿ ಸಂಘ ವಿಜಯಪುರ.

ನಿಗದಿತ ಅವಧಿಯಲ್ಲಿ ಆಕ್ಷೇಪಣೆ ಬಾರದಿದ್ದಲ್ಲಿ, ಸಂಘಗಳ ನೋಂದಣಿ ರದ್ದತಿಗೆ ಅಂತಿಮ ಕ್ರಮ ಕೈಗೊಳ್ಳಲಾಗುವುದು ಎಂದು ಸಮಾಪನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗರ್ಭಿಣಿಯರ ಆರೋಗ್ಯ ತಪಾಸಣೆ, ನೋಂದಣಿ ಕಡ್ಡಾಯ

■ ಉದಯರಶ್ಮಿ ದಿನಪತ್ರಿಕೆ

### ವಿಜಯಪುರ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಹೇಳಿಕೆ



ವಿಜಯಪುರ: ಜಿಲ್ಲೆಯಲ್ಲಿರುವ ಎಲ್ಲ ಗರ್ಭಿಣಿಯರ ಮಾಹಿತಿಯನ್ನು ಆರ್.ಸಿ.ಹೆಚ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ನಿಗದಿತ ಸಮಯದಲ್ಲಿ ನೋಂದಣಿ ಮಾಡಬೇಕು ಹಾಗೂ ನಿಯಮಿತವಾಗಿ ಆರೋಗ್ಯ ತಪಾಸಣೆ ಕೈಗೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಅವರು ಹೇಳಿದರು. ನಗರದ ಜಿಲ್ಲಾ ಪಂಚಾಯತ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಆರೋಗ್ಯ ಸಂಘದ ಕಾರ್ಯಕಾರಿಣಿ ಸಭೆಯಲ್ಲಿ ಆರೋಗ್ಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಎಲ್ಲ ತಾಲೂಕಾ ಆರೋಗ್ಯ ಅಧಿಕಾರಿಗಳು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಲ್ಲಿ ಕಡಿಮೆ ಪ್ರಗತಿ ಸಾಧಿಸಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಸಭೆಯನ್ನು ಕರೆದು ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮವಹಿಸಬೇಕು ಎಂದರು. ಆರ್.ಬಿ.ಎಸ್.ಕೆ ತಂಡದಿಂದ ಅಂಗನವಾಡಿ ಕೇಂದ್ರ ಹಾಗೂ ಶಾಲೆಯ ಮಕ್ಕಳ ಆರೋಗ್ಯ ತಪಾಸಣೆಯಲ್ಲಿ ನ್ಯೂನ್ಯತೆ ಕಂಡುಬಂದ ಮಕ್ಕಳು ಹಾಗೂ ಮೇಲ್ಮಟ್ಟದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಮಕ್ಕಳ ಮಾಹಿತಿಯನ್ನು ನೀಡಲು ತಿಳಿಸಿದರು.

2026-27 ನೇ ಸಾಲಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಜಿಲ್ಲಾ ಮಟ್ಟದಲ್ಲಿ ಮಾಹಿತಿ ಶಿಕ್ಷಣ ಮತ್ತು ಸಂವಹನ ಮೂಲಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕ್ರಿಯಾ ಯೋಜನೆಯಲ್ಲಿಯ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ನಿಯಮಾನುಸಾರ ಅನುಷ್ಠಾನಗೊಳಿಸಬೇಕು. ಆಯ್ದ ಸ್ಥಳಗಳಲ್ಲಿ ಆರೋಗ್ಯ ಇಲಾಖೆಯ ಕಾರ್ಯಕ್ರಮದ ಬಗ್ಗೆ ಹೊರ್ಡಿಂಗ್ಸ್ ಅಳವಡಿಸಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಎಂ. ಬಿ. ಬಿರಾದಾರ, ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ಶಿವಾನಂದ ಮಾಸ್ತಿಹೊಳ್ಳಿ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ. ಪರಶುರಾಮ ಹಿಟ್ನಳ್ಳಿ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ರಾಜೇಶ್ವರಿ ಗೊಲಗೇರಿ, ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ. ಅರ್ಚನಾ ಕುಲಕರ್ಣಿ, ಜಿಲ್ಲಾ ಮಲೇರಿಯಾ ಅಧಿಕಾರಿ ಡಾ. ಜಾನ್ ಕಟವಟೆ, ಜಿಲ್ಲೆಯ ಎಲ್ಲಾ ತಾಲೂಕಾ ಆರೋಗ್ಯಾಧಿಕಾರಿಗಳು, ಜಿಲ್ಲಾ ಮಟ್ಟದ ಆಯುಷ್‌ಅಧಿಕಾರಿಗಳು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಭಾಗವಹಿಸಿದ್ದರು.

# ಬಿಜೆಪಿಯ 50ಕ್ಕೂ ಹೆಚ್ಚು ಮುಖಂಡರು, ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆ

### ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಬಬಲೇಶ್ವರ ಮತಕ್ಷೇತ್ರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು ಮತ್ತು ಜನಪರ ಯೋಜನೆಗಳ ಅನುಷ್ಠಾನದಿಂದ ಪ್ರೇರಿತರಾಗಿ, ತಿಕೋಟಾ ತಾಲೂಕಿನ ಹೊನವಾಡ ಗ್ರಾಮದ ಬಿಜೆಪಿಯ 50ಕ್ಕೂ ಹೆಚ್ಚು ಮುಖಂಡರು ಹಾಗೂ ಕಾರ್ಯಕರ್ತರು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಮಂಗಳವಾರ ಮುಖಂಡ ಸುನೀಲ ಡೇಂಬ್ರಿ ಅವರ ನೇತೃತ್ವದಲ್ಲಿ ಈ ವೇಳೆ ಗುರಪ್ಪ ರಂಗಪ್ಪಗೋಳ, ಕೂಸಪ್ಪ ನರಲೆ, ವಿಠ್ಠಲ ತುಪನೂರ, ಸಾವಿತ್ರಿ ಡೇಂಬ್ರಿ, ಸುರೇಖಾ ಡೇಂಬ್ರಿ ಸೇರಿದಂತೆ 50ಕ್ಕೂ ಹೆಚ್ಚು ಕಾರ್ಯಕರ್ತರು ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಹೊನವಾಡದಲ್ಲಿ ಗಮನಾರ್ಹ ಪ್ರಮಾಣದಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲಾಗಿದ್ದು, ಸುಮಾರು 15ರಿಂದ 20 ಸಾವಿರ ಎಕರೆ ಭೂಮಿ ನೀರಾವರಿಯಾಗಿದೆ. ಮುಂದಿನ ದಿನಗಳಲ್ಲೂ ಅಭಿವೃದ್ಧಿಯ ಕಾರ್ಯಗಳು ಮುಂದುವರೆಯಲಿದೆ. ಈ ಸೇರ್ಪಡೆಯೊಂದಿಗೆ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ಮತ್ತಷ್ಟು ಬಲಗೊಂಡಿದೆ.

ಪಕ್ಷ ಸಂಘಟನೆಯಲ್ಲಿ ಹೊಸಬರು ಹಳಬರು ಎಂಬ ಯಾವುದೇ ಭೇದವಿಲ್ಲದೆ, ಎಲ್ಲರನ್ನೂ ಒಗ್ಗೂಡಿಸಿಕೊಂಡು ಕಾಂಗ್ರೆಸ್ ಪಕ್ಷವನ್ನು ಮತ್ತಷ್ಟು ಬಲಪಡಿಸುವನಿಟ್ಟನಲ್ಲಿಮುನ್ನಡೆಯಲಾಗುವುದು ಎಂದು ತಿಳಿಸಿದರು. ಮುಖಂಡ ಸುನೀಲ್ ಡೇಂಬ್ರಿ ಮಾತನಾಡಿ, ಸಚಿವ ಎಂ.ಬಿ. ಪಾಟೀಲ ಅವರ ಬೆನ್ನೆಲುಬಾಗಿ ಕೆಲಸ ಮಾಡುತ್ತೇವೆ. 20ಕ್ಕೂ ಹೆಚ್ಚು ವರ್ಷಗಳಿಂದ ಬಿಜೆಪಿಯಲ್ಲಿದ್ದು ಭ್ರಮನಿರಸನಗೊಂಡಿದ್ದೇವು.

ಸಚಿವ ಎಂಬಿ.ಪಾಟೀಲರ ಇಚ್ಛಾಶಕ್ತಿ, ಸತತ ಕಾಳಜಿಯಿಂದ ಬಬಲೇಶ್ವರ ಕ್ಷೇತ್ರ ಅಭಿವೃದ್ಧಿ ಪಥದಲ್ಲಿ ಸಾಗಿದೆ.

ಈ ಹಿನ್ನೆಲೆಯಲ್ಲಿ ಅವರ ಮೇಲೆ ವಿಶ್ವಾಸವಿಟ್ಟು ಹೊನವಾಡ ಮತ್ತು ಕ್ಷೇತ್ರದ ಪ್ರಗತಿಗಾಗಿ ಕಾಂಗ್ರೆಸ್ ಸೇರಿರುವುದಾಗಿ ಹೇಳಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಪ್ರೊ. ರಾಜು ಆಲಗೂರ, ಅಹಿಂದ ಮುಖಂಡ ಸೋಮನಾಥ ಕಳ್ಳಿಮನಿ ಸೇರಿದಂತೆ ನಾನಾ ಮುಖಂಡರು ಉಪಸ್ಥಿತರಿದ್ದರು.

# ಹನುಮನಿಗೂ ಕಾಡಿದ ಖಿನ್ನತೆ


■ ಉದಯರಶ್ಮಿ ದಿನಪತ್ರಿಕೆ

## ರಾಜ ನುಡಿ

ಬದುಕಿನ ಕೆಲ ಸಮಯ ಸಂದರ್ಭಗಳು ಎಂತಹ ಮನುಷ್ಯನನ್ನು ಕೂಡಾ ಕೆಲವೊಮ್ಮೆ ಖಿನ್ನತೆಗೆ ತಳ್ಳುತ್ತವೆ. ಮಾನಸಿಕವಾಗಿ ದುರ್ಬಲಗೊಳಿಸುತ್ತವೆ. ಒಂದು ಹೆಜ್ಜೆ ಮುಂದೆ ಹೋಗಿ ಆತ್ಮಹತ್ಯೆ ಮಾಡಿಕೊಳ್ಳಬೇಕು ಎನಿಸುವಂತೆ ಮಾಡುತ್ತವೆ.

ನೀನು ಎಷ್ಟೇ ದೊಡ್ಡ ಶ್ರೀಮಂತನಿರು, ಎಂತಹುದೇ ಅಧಿಕಾರದಲ್ಲಿರು, ಎಂತಹುದೇ ಪ್ರಖ್ಯಾತಿ ಪಡೆದಿರು, ನೀ ಹೆಣ್ಣೇ ಆಗಿರು, ಗಂಡೇ ಆಗಿರು ಒಂದಿಲ್ಲ ಒಂದು ಸಲವಾದರೂ ಈ ಖಿನ್ನತೆ (ಆಜ–ಿಡಿಝುಂಟ), ಆತ್ಮ ಹತ್ಯೆಯ ಆಲೋಚನೆ (ಖಣಛಿಜಚಿಟ ಖಿಜಟಿಜಜಟಿಛಿಥಿ)ಕಾಡದೆ ಇರದು.

ಇಂತಹ ಸಂದರ್ಭಗಳಲ್ಲಿ ಮನುಷ್ಯ ಆ ಕ್ಷಣದ ಖಿನ್ನತೆಯ ಮೀರಿ ಆಲೋಚಿಸದೇ, ದಿನಾಲೂ ಸಾಯುವುದಕ್ಕಿಂತ ಒಂದೇ ಕ್ಷಣಕ್ಕೆ ಆತ್ಮಹತ್ಯೆ ಮಾಡಿಕೊಂಡು ಶಾಶ್ವತ ಪರಿಹಾರ



ಕಂಡುಕೊಳ್ಳೋಣವೆಂದು ಸಾವಿಗೆ ಶರಣಾಗಿ ಬಿಡುತ್ತಾನೆ. ಆಯಾ ಸಂದರ್ಭದ ಸಮಸ್ಯೆಗಳ ಮುಂದೆ, ತನ್ನದೇ ಮಕ್ಕಳು, ತನ್ನದೇ ತಂದೆ–ತಾಯಿಗಳು, ತನ್ನದೇ ಆಪ್ತರು ಆ ಕ್ಷಣದಲ್ಲಿ ಅದೃಶ್ಯವಾಗಿಬಿಡುತ್ತಾರೆ. ಭರವಸೆ ಇಲ್ಲದ ಬದುಕಿನ ಬರಡು ಕ್ಷಣಗಳೆಂದರೆ ಆತ್ಮಹತ್ಯೆಗೆ ಶರಣಾಗುವ ಮುಂಚೆಯ ಕ್ಷಣಗಳು. ಆ ಭಯಾನಕ ಭರವಸೆಯೇ ಕಾಣದ ಖಿನ್ನತೆಯಿಂದ ಹೊರಬರಲು ಆ ಕ್ಷಣಕ್ಕೆ ಆ ವ್ಯಕ್ತಿ ವಿಭಿನ್ನವಾಗಿ ಯೋಚಿಸುವುದೇ ಇಲ್ಲಾ.

ಒಂದು ವೇಳೆ ಈ ಸಂದರ್ಭದ ಸುಳಿಯಲ್ಲಿರುವ ವ್ಯಕ್ತಿ, ಸ್ವಲ್ಪವೇ ಸ್ವಲ್ಪ ವಿಭಿನ್ನವಾಗಿ ಯೋಚಿಸುವುದಾದರೆ ಪರಿಹಾರ ಪಕ್ಕದಲ್ಲೇ ಇರುತ್ತದೆ. ಅದನ್ನು ಕಂಡುಕೊಳ್ಳುವ ತಾಳ್ಮೆ, ತಾಕತ್ತು ಆ ವ್ಯಕ್ತಿಯಲ್ಲಿದ್ದರೆ ಮಾತ್ರ ಆ ವ್ಯಕ್ತಿ ಹೊರಬರುತ್ತೇವೆ. ಇಲ್ಲವಾದಲ್ಲಿ ಎಂತಹ ಶಕ್ತಿಶಾಲಿ ಮನುಷ್ಯನಾದರೂ ಸಾವಲ್ಲಿ ಅಂತ್ಯವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ.

ಹೀಗೊಬ್ಬ ಶಕ್ತಿಶಾಲಿ ಆತ್ಮಹತ್ಯೆಗೆ ಯೋಚಿಸಿದ ವಿಚಾರ ಇಲ್ಲಿದೆ ನೋಡಿ.

ರಾಮಾಯಣದ ಹನುಮನೆಂದರೆ ಶಕ್ತಿಶಾಲಿ ಪಾತ್ರವಾಗಿ ನಾವು ನೋಡುತ್ತೇವೆ. ಯಾವುದಕ್ಕೂ ಹೆದರದ ಶೂರ, ಪರಾಕ್ರಮಿ ಎಂದು ತಿಳಿದಿದ್ದೇವೆ. ಇಂತಹ ಪಾತ್ರವನ್ನೇ ನಾವು ಭಯ ನಿವಾರಕ ಎಂದು ಇಂದಿಗೂ ಪೂಜಿಸುತ್ತೇವೆ.

ಆದರೆ ವಾಲ್ಮೀಕಿ ಮಹರ್ಷಿಯೇ ಬರೆದ ರಾಮಾಯಣದಂತೆ, ಒಂದು ಸಂದರ್ಭದಲ್ಲಿ ಹನುಮನು ಖಿನ್ನತೆಗೆ ಜಾರಿ, ಆತ್ಮಹತ್ಯೆಗೆ ಯೋಚಿಸಿರುತ್ತಾನೆ. ಏನ್ ಸ್ವಾಮಿ ಇದು ಹೀಗೇ ಹೇಳ್ತಿದಿಯ ಅನಬೇಡಿ. ಇದು ನಾನು ಹೇಳಿದ್ದಲ್ಲ. ವಾಲ್ಮೀಕಿ ಮಹರ್ಷಿ ಬರೆದದ್ದು. ಹಾಗಾದ್ರೆ ಇಲ್ಲಿ ಪೂರ್ತಿಯಾಗಿ ಕೇಳಿ..

ಶ್ರೀರಾಮ, ಲಕ್ಷ್ಮಣ, ಸುಗ್ರೀವ, ಜಾಂಬವಂತ ಇಡೀ ವಾನರ ಸೈನ್ಯ ಎಲ್ಲರೂ ಸೀತೆಯ ಸುಳಿವನ್ನು ಪತ್ತೆ ಹಚ್ಚಲು ಹನುಮನನ್ನು ನಂಬಿ, ನಿಯೋಜಿಸಿ, ಹುರಿದುಂಬಿಸಿ ಸಾಗರೋಲ್ಲಂಘನ ಮಾಡಿಸಿ ಲಂಕೆಗೆ ಕಳಿಸುತ್ತಾರೆ. ಘನ ಸಾಗರವ ನೆಗೆದು ಅಪರಿಚಿತ ರಾಕ್ಷಸರ ಸ್ಥಳ ಲಂಕೆಗೆ ಹನುಮ ತಲುಪುತ್ತಾನೆ. ಲಂಕೆಯ ಗುಡ್ಡ–ಬೆಟ್ಟ, ಕಾಡು–ಮೇಡು, ಮೂಲೆ–ಮೂಲೆಗಳನ್ನು ಶೋಧಿಸಿದರೂ ಸೀತೆಯ ಸುಳಿವು ಸಿಗದು.


ಹಗಲು–ರಾತ್ರಿ, ದಿನ–ವಾರಗಳು, ತಿಂಗಳುಗಳು ರಾವಣನ ರಕ್ಕಸ ಅರಮನೆಯ ಪ್ರತಿ ಸೆರೆಮನೆ, ಪ್ರತಿ ಕೋಣೆ ಕೋಣೆಗಳನ್ನು,



ಮೂಲೆ ಮೂಲೆಗಳನ್ನು ಹುಡುಕಿ ಹುಡುಕಿ ಸುಸ್ತಾಗಿ ಎಲ್ಲಿಯೂ ಸೀತೆಯ ಸುಳಿವನ್ನು ಕಾಣದೆ ದುಃಖಕ್ಕೆ ಈಡಾಗಿ ಹತ್ತಿರವಿರುವ ಒಂದು ವನದಲ್ಲಿ ವಿಶ್ರಾಂತಿ ಪಡೆಯಲು ಬಂದು ಕುಳಿತುಕೊಂಡು ಖಿನ್ನತೆಗೆ ಜಾರುತ್ತಾನೆ. ಶ್ರೀರಾಮ,ಲಕ್ಷ್ಮಣ, ಸುಗ್ರೀವ, ಇಡೀ ವಾನರ ಸೇನೆ ಹಾಗೂ ಅಯೋಧ್ಯೆ ಎಲ್ಲರೂ ಭರವಸೆಯಿಂದ ಮುಂದೆ ನೋಡುತ್ತಿರುವುದು ನನ್ನನ್ನೇ. ಸೀತೆಯ ಸುಳಿವನ್ನು ತಂದಾನು. ಸೀತೆ ಇರುವ ಸಿಹಿ ಸುದ್ದಿಯನ್ನು ಹೊತ್ತು ಬಂದಾನು ಎಂದು ಸಾಗರದ ಆಚೆ ನೋಡುತ್ತಾ ಕೇವಲ ನನಗಾಗಿ ಕಾಯುತ್ತಿದ್ದಾರೆ. ನನಗೆ ಇಲ್ಲಿ ಸೀತೆಯ ಸುಳಿವೇ ಇಲ್ಲ.

ಇಲ್ಲಿ ಎಲ್ಲಿಯೂ ಸೀತೆ ಕಾಣುತ್ತಿಲ್ಲವೆಂದಾದರೆ ಈ ರಾಕ್ಷಸರು ಸೇರಿ ಅವಳನ್ನು ತಿಂದು ಹಾಕಿದರೆ ಅಥವಾ ಈ ರಾಕ್ಷಸನನ್ನು ನೋಡಿ ಹೆದರಿ ಸೀತಾಮಾತೆ ಪ್ರಾಣ ತ್ಯಾಗ ಮಾಡಿದಳೆ! ಅಥವಾ ರಾಮನ ಭಯದಿಂದ ರಾವಣನು ಸೀತೆಯನ್ನು ಹೊತ್ತು ತರುವಾಗ ಸಾಗರದಲ್ಲಿಯೇ ಬೀಳಿಸಿ ಬಂದನೇ! ಏನಾದರೂ ಒಂದು ಸುಳಿವು ಸಿಗಬೇಕಲ್ಲ. ಏನು ಸಿಗುತ್ತಿಲ್ಲ. ಸೀತೆ ಬದುಕಿದ್ದರೆ ನನ್ನ ಕಣ್ಣಿಗೆ ಕಾಣಲೇಬೇಕಲ್ಲ ಏಕೆಂದರೆ ನಾನು ಹುಡುಕದ ಯಾವ ಸ್ಥಳವೂ ಉಳಿದಿಲ್ಲ. ಹೆಜ್ಜೆ ಹೆಜ್ಜೆಗೂ ನಾನು ಶೋಧಿಸಿ ಬಂದಿದ್ದೇನೆ. ಸೀತೆಯ ಸುಳಿವೇ ಇರದೆ ಮರಳಿ ರಾಮನ ಬಳಿ ಹೇಗೆ ಹೋಗಲಿ?

ಸೀತೆ ಇಲ್ಲದ ರಾಮನು ದೇಹ ತ್ಯಾಗ ಮಾಡುವನು. ರಾಮನು ಇಲ್ಲವಾದರೆ ಲಕ್ಷ್ಮಣನೂ ಇಲ್ಲವಾಗುವನು. ರಾಮ ಲಕ್ಷ್ಮಣರು ಇಲ್ಲವಾದರೆ ಭರತನು ಪ್ರಾಣ ತ್ಯಾಗ ಮಾಡುವನು. ಭರತನು ಇಲ್ಲವಾದರೆ ಶತ್ರುಘ್ನ ಜೀವ ತ್ಯಜಿಸುವನು. ರಾಮ–ಲಕ್ಷ್ಮಣ, ಭರತ–ಶತ್ರುಘ್ನ ಇವರೆಲ್ಲರೂ ಇಲ್ಲವೆಂದಾದರೆ ತಾಯಿ ಕೌಸಲ್ಯ ಮತ್ತು ಸುಮಿತ್ರ ತಮ್ಮ ಪ್ರಾಣವನ್ನು ಬಿಡುವರು. ಈ ಸ್ಥಿತಿಯನ್ನು ಕಂಡು ಅಯೋಧ್ಯೆಯ ಜನ ಬದುಕುವರೇ! ಹೀಗಾದರೆ ನನ್ನಿಂದ ಅನಾಹುತವೇ ಆಗುವುದು. ಈ ಅನರ್ಥಕ್ಕೆ ಕಾರಣ ಬರಿಗೈಲಿ ಹೋದ ನಾನಾಗುವೆ. ನನ್ನ ದೈವ ಶ್ರೀ ರಾಮನಿಗೆ ನಾನು ಹೇಗೆ ಮುಖ ತೋರಿಸಲಿ! ನಾನು ಇದ್ದೂ ನಿಷ್ಪ್ರಯೋಜ–ಕನಲ್ಲವೇ? ಇಂತಹ ಅನರ್ಥ ನನ್ನಿಂದ ಆಗುವ ಮೊದಲು ನಾನೇ ಇಲ್ಲವಾದರೆ ಒಳ್ಳೆಯದು. ಸೀತೆಯ ಸುಳಿವಿಲ್ಲದೆ ಮರಳಿ ಹೋಗಿ ಇಷ್ಟೆಲ್ಲ ಅನರ್ಥಕ್ಕೆ ಕಾರಣವಾಗುವ ಬದಲು ನಾನೇ ಆತ್ಮಹತ್ಯೆ ಮಾಡಿಕೊಂಡರೆ ಒಳಿತು ಎಂದು ನಿರ್ಧರಿಸಿ ಆತ್ಮಹತ್ಯೆಗೆ ಹನುಮ ಸಿದ್ದನಾಗುತ್ತಾನೆ. ಹಾಗಾದರೆ ದೇಹ ತ್ಯಾಗವನ್ನು ಮಾಡಲು ನನ್ನ ಮುಂದೆ ಮೂರು ಆಯ್ಕೆಗಳಿವೆ. ಒಂದು ಹತ್ತಿರದ ಸಾಗರದಲ್ಲಿ ಹೋಗಿ ಮುಳುಗಿ ದೇಹ ತ್ಯಾಗ ಮಾಡುವುದು ಮತ್ತೊಂದು ಆಹಾರವನ್ನು ತ್ಯಜಿಸಿ ಉಪವಾಸ ದೇಹ ತ್ಯಾಗ ಮಾಡುವುದು, ಮಗದೊಂದು ಉರಿ



ಕಿಚ್ಚನ್ನು ಹೊತ್ತಿಸಿ ಅದರೊಳಗೆ ನೆಗೆದು ಪ್ರಾಣ ಬಿಡುವುದು. ಈ ಮೂರು ಆತ್ಮಹತ್ಯೆಯ ದಾರಿಗಳಲ್ಲಿ ನಾನು ಯಾವುದನ್ನು ಆಯ್ಕೆ ಮಾಡಿಕೊಳ್ಳಲಿ ಎಂದು ಚಿಂತಿಸುತ್ತಿರುತ್ತಾನೆ.

ತನ್ನ ಅಂತಿಮ ದೇಹ ತ್ಯಾಗದ ಮಾರ್ಗವೊಂದನ್ನು ಮನದಲ್ಲಿ ನಿಶ್ಚಯಿಸಿಕೊಂಡು ಕೊನೆಯ ಬಾರಿ ಅಯೋಧ್ಯೆಯ ಕಡೆ ಮುಖ ಮಾಡಿ ಶ್ರೀರಾಮನನ್ನು ಒಮ್ಮೆ ನೆನೆಯುತ್ತಾನೆ. ಒಳ್ಳೆಯ ಧನಾತ್ಮಕ ದಿಕ್ಕಿನ ಕಡೆ ಮುಖ ಮಾಡಿದ ಕ್ಷಣವೇ ಅಯೋಧ್ಯೆಯ ಕಡೆಯಿಂದ ತೂರಿ ಬರುವ ತಂಗಾಳಿ ಹನುಮನ ಮುಖಕ್ಕೆ ಸೋಕಿದ ತಕ್ಷಣವೇ ಆತ್ಮಹತ್ಯೆಯ ನಕಾರಾತ್ಮಕ ಚಿಂತನೆಯ ಬದಲಾಗಿ ಧನಾತ್ಮಕ ಚಿಂತನೆ ಅವನ ಮನಸ್ಸಲ್ಲಿ ಮೂಡ ತೊಡಗುತ್ತದೆ.

ಕೈ ಇಲ್ಲದೆ ಬೀಗ ಯಾರಾದರೂ ತಯಾರಿಸುತ್ತಾರೆಯೇ? ಪರಿಹಾರವಿಲ್ಲದೆ ಸಮಸ್ಯೆ ಉದ್ಭವವಾಗುತ್ತದೆಯೇ? ಇಷ್ಟೆಲ್ಲಾ ಕರ್ಮಗಳನ್ನು ದಾಟಿ ನಾನು ಈ ಜಾಗಕ್ಕೆ ತಲುಪಿದ್ದೇನೆ ಎಂದಾದರೆ ಏನಾದರೂ ಒಂದು ಕಾರಣ ಇರಲೇಬೇಕು. ಇಷ್ಟು ಬೇಗ ನಾನು ಸೋತು ಹೋದೆನೇ. ಹೀಗೆ ಸೋತರೆ ಅವರೆಲ್ಲರ ನಂಬಿಕೆಗೆ ನಾನು ದ್ರೋಹ ಬಗೆದಂತೆ ಅಲ್ಲವೇ! ಅಲ್ಲಿಯವರೆಗೂ ಇದ್ದ ಹನುಮನ ಆತ್ಮಹತ್ಯೆಯ ಋಣಾತ್ಮಕ ಚಿಂತನೆಗಳು, ಧನಾತ್ಮಕ ಚಿಂತನೆಗಳಿಂದ ಪಲ್ಲಟಗೊಳ್ಳಲು ಪ್ರಾರಂಭವಾದವು. ಅಲ್ಲಿಯವರೆಗೂ ಸಾಯುವ ಬಗ್ಗೆ ಚಿಂತಿಸುತ್ತಿದ್ದ, ಖಿನ್ನತೆಗೆ ಜಾರಿದ ಹನುಮನ ತಲೆಯಲ್ಲಿ ಆ ಕ್ಷಣ–ಕ್ಕೆ ಆಲೋಚನೆಯೊಂದು ಹೊಳೆಯಿತು. ಲಂಕೆಯ ಪ್ರತಿ ಮೂಲೆ ಮೂಲೆಯನ್ನು ಹುಡುಕಿದ ನಾನು, ಈ ಕ್ಷಣ ನಾನೇ ಕುಳಿತಿ–ರುವ ಸ್ಥಳವನ್ನೇ ಶೋಧಿಸಿಲ್ಲ ಎಂಬುದಾಗಿತ್ತು. ತಕ್ಷಣಕ್ಕೆ ಎದ್ದವನೇ ತಾನು ಕುಳಿತಿರುವ ಸಣ್ಣ ಪ್ರದೇಶವನ್ನು ಶೋಧಿಸಲು ಪ್ರಾರಂಭಿಸಿದಾಗ ಅಚ್ಚರಿಯೊಂದು ಕಾದಿತ್ತು. ಅಲ್ಲಿ ಇಲ್ಲಿ ಮರದಿಂದ ಮರಕ್ಕೆ ನೆಗೆದು ಶೋಧಿಸುವಾಗ ಮರವೊಂದರ ಕೆಳಗೆ ಒಂಟಿ ಹೆಣ್ಣೊಂದು ಚಿಂತಾಕ್ರಾಂತಳಾಗಿ ಕುಳಿತಿರುವುದು ಕಾಣಿಸಿತು. ಅವಳೇ ಸೀತೆ ಎಂದು ದೃಢೀಕರಿಸಿಕೊಂಡ ನಂತರ ಸೀತೆ ಇರುವ ಸ್ಥಳ 'ಅಶೋಕ ವಾಟಿ–ಕಾ' ಎಂಬುದು ತಿಳಿಯಿತು. ತಾನು ಕುಳಿತು ತನ್ನ ಆತ್ಮಹತ್ಯೆಯ ಬಗ್ಗೆಯೇ ಯೋಚಿಸುತ್ತಿದ್ದ ಆ ಸ್ಥಳದಲ್ಲೇ ಪರಿಹಾರವಿತ್ತು. ಅದನ್ನು ಅರಿಯದೇ ಇದ್ದಿದ್ದರೆ ಹನುಮ ದೇಹ ತ್ಯಾಗ ಮಾಡುತ್ತಿದ್ದನೇನೋ.

ಹೀಗಾಗಿ ಆತ್ಮಹತ್ಯೆಯ ಆಲೋಚನೆಯಲ್ಲಿರುವ ಅನೇಕ ವ್ಯಕ್ತಿಗಳು ತಾವು ಪರಿಹಾರಕ್ಕೆ ಹತ್ತಿರವೇ ಇದ್ದರೂ ಅದನ್ನು ಅರಿಯದ ಮೂಡರಾಗಿರುತ್ತಾರೆ. ಹೀಗಾಗಿ ಆತ್ಮಹತ್ಯೆ, ಖಿನ್ನತೆ ಜೀವನದ ಸಮಸ್ಯೆಗಳಿಗೆ ಪರಿಹಾರವಲ್ಲ. ಅದರಿಂದ, ಅದರಾಚೆ ಆಲೋಚಿಸುವ ಔದಾರ್ಯತೆಯನ್ನು ನಾವು ಹೊಂದಬೇಕು. ಆಗ ಮಾತ್ರ ಜೀವನದ



ಸಮಸ್ಯೆಗಳನ್ನು ನಾವು ಗೆಲ್ಲಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಮಧ್ಯದಲ್ಲಿಯೇ ಸಮಸ್ಯೆಗೆ ಸೋತು ಶರಣಾಗಿಬಿಡುತ್ತೇವೆ. ಹನುಮನಂತವ–ರಿಗೆ ಅಂತಹ ಖಿನ್ನತೆ ಕಾಡಿದೆ ಎಂದಾದರೆ, ಅಂತವನಿಗೆ ಆತ್ಮಹತ್ಯೆಯ ಆಲೋಚನೆ ಬಂದಿರಬಹುದಾದರೆ ನಾವು ನೀವು ಸಾಮಾನ್ಯ ಮನುಷ್ಯರು. ನಮಗೇ ಇಂತಹ ಆಲೋಚನೆಗಳು ಬರದೇ ಇರುತ್ತವೆಯೇ! ಬಂದೇ ಬರುತ್ತವೆ ಹಾಗಂತ ಸಾಯುವುದೇ ಪರಿಹಾರವಲ್ಲ ಏಕೆಂದರೆ ಪರಿಹಾರವಿಲ್ಲದ ಸಮಸ್ಯೆಯೇ ಇಲ್ಲಾ. ಮೋಡಗಳಾವರಿಸಿ ಕತ್ತಲಾಗಿಸಿದ ಕಡು ರಾತ್ರಿಯಲ್ಲೂ ಒಂದೇ ಒಂದು ಮಿಂಚು ಇಡೀ ಕತ್ತಲೆಯನ್ನು ಒಂದೇ ಕ್ಷಣದಲ್ಲಿ ಪಲ್ಲಟಗೊಳಿಸುವಂತೆ, ನೂರು ನಕಾರಾತ್ಮಕ ಆಲೋಚನೆಗಳು ನಮ್ಮನ್ನು ಆವರಿಸಿದ್ದರೂ ಅವುಗಳನ್ನು ಒಂದೇ ಒಂದು ಧನಾತ್ಮಕ ಆಲೋಚನೆಯಿಂದ ಪಲ್ಲಟಗೊಳಿಸಬಹುದು. ಆ ಪರಿಹಾರವನ್ನು ಕಂಡುಕೊಳ್ಳುವ ತಾಕತ್ತು ನಮ್ಮಲ್ಲಿರಬೇಕು. ಆ ಪರಿಹಾರ ಇದೇ ಎಂಬ ಭರವಸೆ ಹೊತ್ತು ನಡೆಯಬೇಕು. ಆಗ ಮಾತ್ರ ಬದುಕಿನ ಗಮ್ಯವನ್ನು ಗೆಲುವಿಂದ ತಲುಪುತ್ತೇವೆ. ಸೋಲನ್ನು ಸೋಲಿಸುತ್ತೇವೆ. ನೆನಪಿರಲಿ ಭರವಸೆಯೇ ಬದುಕು.


ಲೇಖನ
– ಡಾ. ರಾಜಶೇಖರ ನಾಗೂರ
ಸಂಚಾಲಕರು
'ನಮ್ಮ ಕಥಾ ಅರಮನೆ '




# ವ್ಯವಸ್ಥೆ ತಪ್ಪು ಹುಡುಕದೇ ನಮ್ಮ ತಪ್ಪನ್ನು ಸರಿಪಡಿಸಿಕೊಳ್ಳೋಣ

■ ಉದಯರಶ್ಮಿ ದಿನಪತ್ರಿಕೆ


## ಮನದಂಗಳ

ಒಂದು ಹಳ್ಳಿಯ ಹೊರಭಾಗದಲ್ಲಿ ಇದ್ದ ಬೃಹತ್ ಆಲದ ಮರದಲ್ಲಿ ಹೆಣ್ಣು ಗಿಳಿಯೊಂದು ಗೂಡನ್ನು ಕಟ್ಟಿಕೊಂಡು ತನ್ನ ಮರಿಗಳೊಂದಿಗೆ ವಾಸಿಸುತ್ತಿತ್ತು. ಗಿಳಿಗೆ ಪ್ರತಿದಿನವೂ ತನ್ನ ಗೂಡಿನಲ್ಲಿ ಏನೋ ಒಂದು ರೀತಿಯ ಕೆಟ್ಟ ವಾಸನೆಯು ಬರುತ್ತಿದೆ ಎಂದು ಅನಿಸುತ್ತಿತ್ತು. ತನ್ನ ಗೂಡಿನೊಳಗೆ ಈ ಕೆಟ್ಟ ವಾಸನೆ ಎಲ್ಲಿ ಬರುತ್ತಿದೆ ಎಂದು ಗಿಳಿಯು ಎಷ್ಟೇ ಹುಡುಕಿದರೂ ಅದಕ್ಕೆ ವಾಸನೆಯ ಮೂಲ ದೊರೆಯಲಿಲ್ಲ. ತಾನು ಇರುವಂತಹ ಗೂಡು ಎಷ್ಟೇ ಉತ್ತಮವಾಗಿ ಇದ್ದರೂ ಅದರೊಳಗಿಂದ ಬರುತ್ತಿರುವ ಕೆಟ್ಟ ವಾಸನೆಯಿಂದಾಗಿ ಆ ಗಿಳಿಗೆ ಗೂಡಿನಲ್ಲಿ ಇರಲು ಸಾಧ್ಯವಾಗಲಿಲ್ಲ.

ಕೊನೆಗೆ ಆ ಗಿಳಿಯು ತನ್ನ ಗುಂಪಿನ ಹಿರಿಯ ಪಾರಿವಾಳದ ಬಳಿಯಲ್ಲಿ ತನ್ನ ಸಮಸ್ಯೆಯನ್ನು



ಹೇಳಿಕೊಳ್ಳುತ್ತಾ ನನ್ನನ್ನೊಂದು ವಿಭಿನ್ನವಾದ ಸಮಸ್ಯೆಯು ಕಾಡುತ್ತಿದೆ, ಅದು ಏನೆಂದರೆ ನನ್ನ ಗೂಡಿನಿಂದ ಒಂದು ರೀತಿಯ ಅಸಹ್ಯವಾದ ವಾಸನೆಯು ಬರುತ್ತಿದೆ. ಆ ವಾಸನೆಯಿಂದಾಗಿ ನಾನು ಹಲವಾರು ಬಾರಿ ನನ್ನ ಗೂಡನ್ನು ಬದಲಿಸುತ್ತಾ ಬಂದಿದ್ದೇನೆ. ಆದರೂ ಗೂಡಿನಿಂದ ಬರುತ್ತಿರುವ ವಾಸನೆಯು ಕಡಿಮೆಯಾಗಲಿಲ್ಲ ಮತ್ತು ನನ್ನ ಈ ಸಮಸ್ಯೆಯನ್ನು ಪರಿಹ–



ರಿಸಲೂ ನನ್ನಿಂದ ಸಾಧ್ಯವಾಗಿಲ್ಲ. ದಯವಿಟ್ಟು ನನ್ನ ಈ ಸಮಸ್ಯೆಯನ್ನು ಬಗೆಹರಿಸಿ ಎಂದು ಕೇಳಿಕೊಂಡಿತು.

ಗಿಳಿಯ ಸಮಸ್ಯೆಯನ್ನು ಅರಿತ ಹಿರಿಯ ಗಿಳಿಯು, ಅದರ ಗೂಡಿಗೆ ಹೋಗಿ ಪರೀಕ್ಷಿಸಿ, ಅಯ್ಯಾ ಗಿಳಿಯೇ ನೀನು ಇನ್ನು ಎಷ್ಟು ಬಾರಿ ನಿನ್ನ ಗೂಡನ್ನು ಬದಲಿಸಿದರೂ ನಿನ್ನ ಕೆಟ್ಟದಾಗಿ ಬರುತ್ತಿರುವ ಈ ವಾಸನೆಯ ಸಮಸ್ಯೆಯು ಬಗೆಹ–ರಿಯದು. ಏಕೆಂದರೆ ನೀನು ಅನುಭವಿಸುತ್ತಿರುವ ವಾಸನೆಯ ಸಮಸ್ಯೆಯು ನಿನ್ನ ಗೂಡಿನಿಂದ ಬರುತ್ತಿರುವ ವಾಸನೆಯಲ್ಲ. ಬದಲಿಗೆ ಆ ವಾಸನೆ ಬರುತ್ತಿರುವುದು ನಿನ್ನ ದೇಹದಿಂದಲೇ ಎಂದಿತು.

ಇದನ್ನು ಅರಿತ ಗಿಳಿಗೆ ತನ್ನ ತಪ್ಪಿನ ಅರಿವಾಗಿ ಹಿರಿಯ ಗಿಳಿಯ ಎದುರು ನಾಚಿಕೆಯಿಂದ ತಲೆತಗ್ಗಿಸಿತು. ಇನ್ನೊಬ್ಬರಲ್ಲಿರುವ ತಪ್ಪುಗಳನ್ನು ಮತ್ತು ಹುಳುಕುಗಳನ್ನು ಹುಡುಕುವ ಭರದಲ್ಲಿ ನಮ್ಮ ಹುಳುಕುಗಳ ಕಡೆಗೆ ಗಮನವಹಿಸುವುದಿಲ್ಲ. ಬೇರೆಯವರ ಒಳ್ಳೆಯತನವನ್ನು ಹುಡುಕುವ ಬದಲು ಅವರ ತಪ್ಪು ಹುಡುಕುವುದು ನಮಗೆ ಮುಖ್ಯವಾಗಿರುತ್ತದೆ. ಆದರೆ ನಮ್ಮ ದೃಷ್ಟಿಯೇ ಸರಿಯಿಲ್ಲದಾಗ, ಇನ್ನೊಬ್ಬರ ತಪ್ಪನ್ನು ಹುಡುಕಿ ಏನೂ ಪ್ರಯೋಜನವಿಲ್ಲ. ಇತರರ ತಪ್ಪನ್ನು ಹುಡುಕುವ ಬದಲು, ನಮ್ಮನ್ನು ನಾವು



ಮೊದಲು ಸರಿಪಡಿಸಿಕೊಂಡು ಇತರರ ಒಳ್ಳೆಯ ಕೆಲಸವನ್ನು ಪ್ರಶಂಸಿಸಿ ನಮ್ಮನ್ನೊಮ್ಮೆ ನಾವೇ ವಿಶ್ಲೇಷಿಸಿಕೊಳ್ಳುವುದು ಉತ್ತಮ.




ಲೇಖನ
– ಸಂತೋಷ್ ರಾವ್ ಪೆರ್ಮುಡ.
ಪೆರ್ಮುಡ ಮನೆ, ಪಟ್ರಮೆ ಗ್ರಾಮ ಮತ್ತು ಅಂಚೆ
ಬೆಳ್ತಂಗಡಿ ತಾಲೂಕು
ದ.ಕ ಜಿಲ್ಲೆ–574198
ದೂ:9742884160


# ರಾಘವೇಂದ್ರ ಸ್ವಾಮಿಗಳ 355ನೇ ಆರಾಧನಾ ಮಹೋತ್ಸವ

ಚಿತ್ತಾಪುರ; ಪಟ್ಟಣದ ಬ್ರಾಹ್ಮಣ ಗಲ್ಲಿಯಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ 355ನೇ ಆರಾಧನಾ ಮಹೋತ್ಸವವು ರಾಘವೇಂದ್ರ ಸ್ವಾಮಿಗಳ ಮೃತ್ತಿಕಾ ಬೃಂದಾವನ ಉತ್ತರಾದಿಮಠದಿಂದ ಸಂಭ್ರಮದಿಂದ ಆಚರಿಸಲಾಯಿತು.

ಇದೇ ವೇಳೆ ಬೆಳೆಗ್ಗೆ ಅಷ್ಟೋತ್ತರ ಪಾರಾಯಣ ಪಂಡಿತ್ ತಿರುಪತಿ ಆಚಾರರಿಂದ ರಾಯರ ಬೃಂದಾವನಕ್ಕೆ ಫಲ ಪಂಚಾಮೃತ ಅಭಿಷೇಕ ಮಾಡಿದರು.

ನಂತರ ಬೃಂದಾವನಕ್ಕೆ ಫಲ ಪುಷ್ಪಗಳಿಂದ ಅರ್ಚಕರಾದ ಉತ್ತಮ ಪುರೋಹಿತ ಭರತ ಕುಮಾರ ಹಾಗೂ ಪವನ ಕುಮಾರ ಅವರಿಂದ ಅಲಂಕಾರ ಮಾಡಲಾಯಿತು.ಪಂ ವೆಂಕಣ್ಣಾಚಾರ್ಯರಿಂದ ಪ್ರವಚನ ಹೇಳಲಾಯಿತು.

# ಅರಿತು ಬಾಳುವುದರಲ್ಲಿ ಸುಖ ಶಾಂತಿಯಿದೆ : ರಂಭಾಪುರಿ ಜಗದ್ಗುರುಗಳು

ಶ್ರೀ ರಂಭಾಪುರಿ ಪೀಠ(ಬಾಳೆಹೊನ್ನೂರು)– ಮನುಷ್ಯ ಜೀವನ ಪವಿತ್ರ ಪಾವನ. ಒಳ್ಳೆಯವರ ನೆರಳಿನಲ್ಲಿ ಬಾಳಿದರೆ ಜೀವನ ವಿಕಾಸಗೊಳ್ಳುವುದು. ಅರಿತು ಬಾಳುವುದರಲ್ಲಿ ಜೀವನದ ಉತ್ಕರ್ಷತೆ ಮತ್ತು ಶ್ರೇಯಸ್ಸಿದೆ. ಸುಖ ಶಾಂತಿ ಬದುಕಿಗೆ ಧರ್ಮವೇ ಮೂಲವೆಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶನಿವಾರ ಶ್ರೀ ಜಗದ್ಗುರು ರಂಭಾಪುರಿ ಪೀಠದಲ್ಲಿ ಶ್ರಾವಣ ಪೂಜಾ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಜೀವನದಲ್ಲಿ ಮನುಷ್ಯ ಧರ್ಮ ನೀತಿ ದಕ್ಷತೆ ಮತ್ತು ಒಳ್ಳೆಯ ಮಾತು ಅಳವಡಿಸಿಕೊಂಡರೆ ಶ್ರೇಯಸ್ಸು ಕಟ್ಟಿಟ್ಟ ಬುತ್ತಿ. ಆತ್ಮ ಸಾಕ್ಷಿ, ಉತ್ತಮ ಆರೋಗ್ಯ ಹಾಗೂ ಸ್ವಾತಂತ್ರ್ಯ ಇವು ಮೂರು ಸಂತೋಷದ ಮೂಲಗಳು. ಪ್ರಾಣ ಯೌವನ ಕಾಲ ಒಮ್ಮೆ ಕಳೆದರೆ ಮತ್ತೆಂದೂ ತಿರುಗಿ ಬರಲಾರವು. ಗುರಿಯಿಲ್ಲದ ಗುರಿ ಸಾಧಿಸದ ಬದುಕು ನಿರರ್ಥಕ. ಸದ್ವಿದ್ಯೆ ಉತ್ತಮ ಸಂಬಂಧ ಆದರ್ಶ ಸ್ನೇಹ ಯಾವಾಗಲೂ ನಮ್ಮೊಂದಿಗೆ ಇದ್ದರೆ ಬಾಳೆಲ್ಲ ಸುಖಮಯವಾಗುವುದೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಧರ್ಮ ಸೂತ್ರದಲ್ಲಿ ನಿರೂಪಿಸಿದ್ದಾರೆ. ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆ ಸಚಿವ ಡಾ॥ ವಿಜಯಾನಂದ ಕಾಶಪ್ಪನವರ ಅತ್ಯಂತ ಭಕ್ತಿ ಶ್ರದ್ಧೆಯಿಂದ ಶ್ರಾವಣ ಮಹಾಪೂಜೆಯಲ್ಲಿ ಸಂಪೂರ್ಣ ಪಾಲ್ಗೊಂಡಿರುವುದು ಅವರಲ್ಲಿರುವ ಧರ್ಮ ನಿಷ್ಠೆಗೆ ಸಾಕ್ಷಿಯಾಗಿದೆ ಎಂದು ಹರುಷ ವ್ಯಕ್ತಪಡಿಸಿ ರೇಶ್ಮೆ ಮಡಿ ಫಲ ಪುಷ್ಪ ಸ್ಮರಣಿಕೆ ಗ್ರಂಥವಿತ್ತು ಶುಭ ಹಾರೈಸಿದರು.



ಗೌರವ ಸ್ವೀಕರಿಸಿದ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆ ಸಚಿವ ಡಾ॥ ವಿಜಯಾನಂದ ಕಾಶಪ್ಪನವರ ಮಾತನಾಡಿ ತಂದೆ ತಾಯಿ ಮತ್ತು ಗುರುಗಳ ಮಾರ್ಗದರ್ಶನದಲ್ಲಿ ಯೋಗ್ಯ ಸಂಸ್ಕಾರ ಪಡೆದರೆ ಭವಿಷ್ಯ ಉಜ್ವಲಗೊಳ್ಳುವುದರಲ್ಲಿ ಅನುಮಾನವಿಲ್ಲ. ಲಿಂ. ಎಸ್. ಆರ್.ಕಾಶಪ್ಪನವರ ಅವರಲ್ಲಿ ರಾಜಕೀಯ ಇಚ್ಛಾಶಕ್ತಿ ಇತ್ತು. ಧರ್ಮದಲ್ಲಿ ಇಟ್ಟ ನಂಬಿಕೆ ಬಹಳ ದೊಡ್ಡದಾಗಿತ್ತು. ಅದೇ ದಾರಿಯಲ್ಲಿ ನಡೆಯುತ್ತಿರುವುದು ನನಗೆ ಸಂತೃಪ್ತಿ ಸಮಾಧಾನ ತಂದಿದೆ. ಶ್ರೀ ರಂಭಾಪುರಿ ಜಗದ್ಗುರುಗಳ ಆಶೀರ್ವಾದ ಯಾವಾಗಲೂ ನಮ್ಮ ಮನೆತನದ ಮೇಲಿದೆ. ಇಂದಿನ ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳ ಆಶೀರ್ವಾದದಿಂದ ನಾನಿಂದು ಮಂತ್ರಿಯಾಗಿ ಜನಸೇವೆ ಮಾಡುವ ಸೌಭಾಗ್ಯ ಒದಗಿ ಬಂದಿದೆ. ರಾಜ್ಯದ ಜನರ ಹಿತ ರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯ ಕೈಕೊಂಡು ಅಭಿವೃದ್ಧಿ ಪಥದತ್ತ ಹೆಜ್ಜೆ ಹಾಕಲಾಗುವುದೆಂದ ಅವರು ವೀರಶೈವ ಲಿಂಗಾಯತ ಸಮುದಾಯ ಇನ್ನುಳಿದ ಎಲ್ಲಾ ಸಮುದಾಯದ ಜನರನ್ನು ಸಮಾನತೆ ಸಾಮರಸ್ಯದತ್ತ ಕರೆತರುವ ಜವಾಬ್ದಾರಿ ಇದೆ. ಶ್ರೀ ರಂಭಾಪುರಿ ಪೀಠದ ಅಭಿವೃದ್ಧಿ ಪರವಾದ ಕಾರ್ಯಗಳಿಗೆ ಸ್ಪಂದಿಸಿ ಕಾರ್ಯ ಮಾಡುತ್ತೇನೆಂದು ಆದಿ ಜಗದ್ಗುರು ರೇಣುಕಾಚಾರ್ಯರ ಸಾಕ್ಷಿಯಾಗಿ ಹೇಳುವೆ ಎಂದರು.

ಸಚಿವರ ತಾಯಿ ಮಾಜಿ ಶಾಸಕಿ ಶ್ರೀಮತಿ ಗೌರಮ್ಮ ಕಾಶಪ್ಪನವರು, ಪತ್ನಿ ಶ್ರೀಮತಿ ವೀಣಾ ಕಾಶಪ್ಪನವರ ಕಾಂಗ್ರೆಸ್ ಯುವ ಧುರೀಣ ಸೋಮು ಗಣಾಚಾರಿ, ಅ.ಭಾ.ವೀ.ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ಎಂ.ಲೋಕೇಶ, ಬೆಂಗಳೂರು ಮಾಜಿ ಮಹಾಪೌರ ಪುಟ್ಟರಾಜು, ಯುವ ಘಟಕದ ರಾಜ್ಯಾಧ್ಯಕ್ಷ ಮನೋಹರ, ಎಂ.ಕೊಟ್ರೇಶಪ್ಪ, ವಿರೂಪಾಕ್ಷಪ್ಪ ಮಲ್ಲಜ್ಜರ ಮೊದಲಾದ ಗಣ್ಯರು ಪಾಲ್ಗೊಂಡು ಗುರುರಕ್ಷೆ ಸ್ವೀಕರಿಸಿದರು. ಸಮಾರಂಭಕ್ಕೂ ಮುನ್ನ ಶ್ರೀ ರಂಭಾಪುರಿ ಜಗದ್ಗುರುಗಳು ಇಷ್ಟಲಿಂಗ ಮಹಾಪೂಜಾ ನೆರವೇರಿಸಿ ಬಂದ ಭಕ್ತರಿಗೆ ಶುಭ ಹಾರೈಸಿದರು. ಸಮಾರಂಭದ ನಂತರ ಅನ್ನ ದಾಸೋಹ ನೆರವೇರಿತು.

# ಕಾಯಕಜೀವಿ, ಆಪ್ತ ಕಾರ್ಯದರ್ಶಿ ಶರಣ ಹಡಪದ ಅಪ್ಪಣ್ಣನವರು: ಡಾ. ಮಲ್ಲಿಕಾರ್ಜುನ ವಡ್ಡನಕೇರಿ

ಕಲಬುರಗಿ : ಫಿಲ್ಟರ್‌ಬೆಡ್ ಬಡಾವಣೆ, ಜಿ.ಡಿ.ಎ ಗೋಕುಲ ನಗರದಲ್ಲಿ ವಚನೋತ್ಸವ ಪ್ರತಿಷ್ಠಾನ ಟ್ರಸ್ಟ್ ಹಾಗೂ ಮಹಾಂತಜ್ಯೋತಿ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ಸಾಂಸ್ಕೃತಿಕ ಭವನದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಮನೆಯಂಗಳಗಳಲ್ಲಿ ಶ್ರಾವಣ ವಚನೋತ್ಸವ ಕಾರ್ಯಕ್ರಮದ ಶರಣ ದರ್ಶನ ಉಪನ್ಯಾಸ ಮಾಲೆಯಲ್ಲಿ ವಿಶ್ವಗುರು ಬಸವಣ್ಣನವರ ಆಪ್ತ ಕಾರ್ಯದರ್ಶಿ ಶರಣ ಹಡಪದ ಅಪ್ಪಣ್ಣನವರ ಕುರಿತು ಉಪನ್ಯಾಸ ಮಾಲೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮಲ್ಲಿಕಾರ್ಜುನ ವಡ್ಡನಕೇರಿ ಉಪನ್ಯಾಸಕರಾಗಿ ಆಗಮಿಸಿದ್ದರು. ಮಹಾಂತಜ್ಯೋತಿ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಶಿವರಾಜ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಅಕ್ಕನ ಬಳಗದ ಮಾಯಾ ಪಾಟೀಲ ಹಾಗೂ ಪ್ರಭಾ ಪ್ರದಾನಿ ಉಪಸ್ಥಿತರಿದ್ದರು.

ಉಪನ್ಯಾಸದಲ್ಲಿ ವಡ್ಡನಕೇರಿಯವರು ಹಡಪದ ಅಪ್ಪಣ್ಣನವರು ತಮ್ಮ ಹಡಪದ ಕಾಯಕದ ಜೊತೆಗೆ ಬಸವಣ್ಣನವರ ಆಪ್ತ ಕಾರ್ಯದರ್ಶಿಯಾಗಿದ್ದರಲ್ಲದೆ ಅನುಭವ ಮಂಟಪದ ಪ್ರಧಾನ ಕಾರ್ಯದರ್ಶಿಯಾಗಿ ಕೂಡ ಕಾರ್ಯನಿರ್ವಹಿಸಿದ್ದರು. ಚಿಂತನಾಶೀಲ ವಚನಗಳನ್ನು ಬರೆದು ಶರಣ ಚಳುವಳಿಯಲ್ಲಿ ಕೊನೆಯವರೆಗೂ ಬಸವಣ್ಣನವರ ಜೊತೆಗೆ ಇದ್ದು ಕಾಯಕಜೀವಿ ಶರಣರೆನಿಸಿಕೊಂಡಿದ್ದರು ಎಂದು ಅವರ ಅನೇಕ ವಚನಗಳ ಉದಾಹರಣೆಯ ಮೂಲಕ ತಿಳಿಸಿದರು.ಅಧ್ಯಕ್ಷತೆ ವಹಿಸಿದ್ದ ಶಿವರಾಜ ಪಾಟೀಲರು 12ನೇ ಶತಮಾನದಲ್ಲಿ ಬಸವಾದಿ ಶರಣರು ಮೇಲು–ಕೀಳು ಭಾವನೆ, ಮೂಢನಂಬಿಕೆಯನ್ನು ಹೋಗಲಾಡಿಸಲು ಬೆಳಿಗ್ಗೆ ಎದ್ದು ಯಾರ ಮುಖ ನಾವು ನೋಡಬಾರದಂತ ಹೇಳುತ್ತಿದ್ದಂತ ಸಮಯದಲ್ಲಿ ಬಸವಣ್ಣನವರು ವಿನಮ್ರತೆ ಮತ್ತು ಕಿಂ–



ಕರತ್ವ ಭಾವನೆಯಿರುವ ಹಡಪದ ಅಪ್ಪಣ್ಣನವರನ್ನೇ ತಮ್ಮ ಆಪ್ತ ಕಾರ್ಯದರ್ಶಿಯಾಗಿ ನೇಮಿಸಿಕೊಂಡಿದ್ದರು. ಯಾವ ಮನುಷ್ಯನಿಗೆ ಸಿರಿವಂತಿಕೆಯ ಮದವೇರಿರುತ್ತದೆಯೋ ಅಂತಹವರಿಗೆ ಏನೂ ಮಾಡಲಾಗುವುದಿಲ್ಲ. ಬಸವಣ್ಣನವರ ತಮ್ಮ ವಚನದಲ್ಲಿ ಹಾವು ತಿಂದವರ ನುಡಿಸಬಹುದು, ಗರ ಹೊಡೆದವರ ನುಡಿಸಬಹುದು, ಸಿರಿಗರ ಹೊಡೆದವರ ನುಡಿಸಲಾಗದು ಎಂದು ಹೇಳಿದ್ದಾರೆ. ದಿನಕ್ಕೆ ಎಷ್ಟು ಕೋಟಿ ದುಡ್ಡನ್ನಾದರೂ ಗಳಿಸಬಹುದು ಆದರೆ ಸಂಸ್ಕಾರವನ್ನು ಗಳಿಸುವುದಕ್ಕಾಗುವುದಿಲ್ಲ. ಅದು ನಮ್ಮ ಮನೆಯಲ್ಲಿಯ ನಡವಳಿಕೆ ನಾವು ಮಾಡುವ ಕಾರ್ಯದಿಂದಲೇ ಬರುತ್ತದೆ. ಅದಕ್ಕಾಗಿ ಮಕ್ಕಳಿಗೆ ಸಂಸ್ಕಾರಭರಿತ ಶಿಕ್ಷಣ ನೀಡುವುದರ ಜೊತೆಗೆ ದಿನಾಲು ಶರಣರ ವಚನಗಳನ್ನು ಕೂಡ ತಿಳಿಸಿಕೊಡುವಂತೆ ಎಲ್ಲ ಶರಣ ತಂದೆ–ತಾಯಿಗಳಿಗೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ವಿಶೇಷವಾಗಿ ಶಿವಶರಣರ ವಚನಗಳ ಪಠಣ ಹಾಗೂ ಗಾಯನ ಮಾಡಿದ ಧಾನಮ್ಮ, ಪ್ರಣವಿ, ಶ್ರೇಯಾಂಕ, ಚಿನ್ಮಯ, ಶ್ರೀಗೌರಿ, ಆಯುಷಿ, ಸ್ವಾತಿ, ಶ್ರೇಯಸ್, ವೀರಕುಮಾರ ಅಲ್ಲದೇ ಅನೇಕ ಮಕ್ಕಳಿಗೆ ಪ್ರತಿಷ್ಠಾನದವತಿಯಿಂದ ಪ್ರಮಾಣ ಪತ್ರಗಳನ್ನು ಕೂಡ ನೀಡಿ ಅಭಿನಂದಿಸಲಾಯಿತು. ಕಾರ್ಯಕ್ರಮಕ್ಕೆ ಬಡಾವಣೆಯ ಸಾರ್ವಜನಿಕರು, ವಚನೋತ್ಸವ ಸಮಿತಿ ಸದಸ್ಯರು, ಬಸವಾಭಿಮಾನಿಗಳು, ಶರಣ–ಶರಣೆಯರು ಆಗಮಿಸಿದ್ದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಅಕ್ಕನ ಬಳಗದವರು ಭಜನೆ ಮಾಡಿದರು. ಕು. ಸೃಷ್ಠಿ ಜಲದೆ ಪ್ರಾರ್ಥನೆ ಗೀತೆ ಹಾಡಿದರು. ಕಲ್ಯಾಣಪ್ಪ ಬಿರಾದಾರ, ವಿಶ್ವನಾಥ ಮಂಗಲಗಿ ಓಂಕಾರ ಧ್ಯಾನ ನಡೆಸಿಕೊಟ್ಟರು. ದಾಸೋಹಿಗಳಾದ ಸಿದ್ಧಾರಾಮ ಹಂಚನಾಳ ಸ್ವಾಗತಿಸಿದರು. ವಚನೋತ್ಸವದ ಸಂಚಾಲಕರಾದ ಶಿವರಾಜ ಅಂಡಗಿ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿಗಳಾದ ಬಸವರಾಜ ಧೂಳಾಗುಂಡಿ ವಂದಿಸಿದರು.

# ನೇಪಾಳದ ಪ್ರಾಕೃತಿಕ ದುರಂತದ ಸುತ್ತ..

■ ಉದಯರಶ್ಮಿ ದಿನಪತ್ರಿಕೆ







ನೇಪಾಳದಲ್ಲಿ ಪ್ರವಾಹದಿಂದ ಕೈಲಾಸ ಪರ್ವತ ಮತ್ತು ಮಾನಸ ಸರೋವರ ಯಾತ್ರೆಯಲ್ಲಿ ಭಾಗಿಯಾಗಿದ್ದ ಕೆಲವು ಯಾತ್ರಿಗಳು ಪ್ರವಾಹದಿಂದ ಕೊಚ್ಚಿ ಹೋದ ಸಂದರ್ಭದಲ್ಲಿ ಕಾರ್ಪೊರೇಟ್ ಅಧ್ಯಾತ್ಮಿಕ ಗುರು ಶ್ರೀ ಜಗ್ಗಿ ವಾಸುದೇವ್ ಅವರು ಕಣ್ಣೀರು ಹಾಕಿದ್ದಾರೆ. ಅವರ ಇಶಾ ಫೌಂಡೇಶನ್ ಗೆ ಸೇರಿದ ಹಲವಾರು ಭಕ್ತರು ಈ ಪ್ರವಾಹದಲ್ಲಿ ಅಸುನೀಗಿದ್ದು ಅವರಿಗೆ ತುಂಬಾ ದುಃಖ ಉಂಟು ಮಾಡಿದೆ. ಆ ದು:ಖ ಅತ್ಯಂತ ಸಹಜವಾದದ್ದು. ನೋವು, ನಲಿವು ಈ ಬದುಕಿನಲ್ಲಿ ಯಾರನ್ನೂ ಬಿಡುವುದಿಲ್ಲ.

ನಿರ್ವಾಣ ಸಮಯದಲ್ಲಿ ಬುದ್ದಂಗೂ ಕಾಡಿತ್ತು ಕಿಬ್ಬೊಟ್ಟೆ ನೋವು. ಅಂದರೆ ಮಾನಸಿಕವಾಗಿ ದೇಹ ತ್ಯಾಗಕ್ಕೆ ಸಿದ್ದರಾದ, ಎಲ್ಲಾ ರೀತಿಯ ಭಾವಗಳನ್ನು ಗೆದ್ದು ಸ್ಥಿತಪ್ರಜ್ಞರಾಗಿದ್ದ ಬುದ್ದರಿಗೂ ನೋವು ಕಾಡದೇ ಬಿಡಲಿಲ್ಲ. ಸಾವು ನೋವು ರೋಗರುಜಿನಗಳು ಯಾರನ್ನೂ ಬಿಡುವುದಿಲ್ಲ.

ನೇಪಾಳದ ಪ್ರವಾಹದಲ್ಲಿ ಮಡಿದವ–ರಿಗೆ ಶ್ರದ್ದಾಂಜಲಿ ಸಲ್ಲಿಸುತ್ತಾ..

ಶಿವರಾತ್ರಿಯ ಸಂದರ್ಭದಲ್ಲಿ ಲಕ್ಷಾಂತರ ಭಕ್ತರೊಂದಿಗೆ ಕುಣಿಯುತ್ತಾ, ಶಿವನನ್ನು ಪೂಜಿಸುವ, ಆರಾಧಿಸುವ, ಶಿವನದೇ ವಾಸಸ್ಥಾನವನ್ನು ನೋಡಲು ಮಾನಸ ಸರೋವರದ ಕೈಲಾಸ ಪರ್ವತ ಯಾತ್ರೆಗೆ ಶಿವನ ಭಕ್ತರೇ ಸಾಗುತ್ತಿರುವಾಗ, ಈ ಪ್ರವಾಹದಿಂದ ಶಿವನ ಭಕ್ತರನ್ನು ರಕ್ಷಿಸಲು ಸಾಧ್ಯವಾಗದಿದ್ದಕ್ಕೆ ಹೊಣೆ ಯಾರಾಗಿರಬಹುದು ಎಂದು ನಾವು ಯೋಚಿಸುವುದು ತಪ್ಪೇ? ಮೆದುಳಿನ ಕೆಲಸವೇ ಅದಾದುದರಿಂದ ಸರಿ ತಪ್ಪುಗಳ ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರ ಮತ್ತು ಆಡಳಿತ ವ್ಯವಸ್ಥೆಯನ್ನು ಸ್ವಲ್ಪಮಟ್ಟಿಗೆ ಪ್ರಶ್ನಿಸಬಹುದಾದರೂ ಈ ರೀತಿಯ ದುರಂತಕ್ಕೆ ಸರ್ಕಾರ ನೇರ ಹೊಣೆಯಾಗುವುದಿಲ್ಲ. ಏಕೆಂದರೆ ಯಾತ್ರೆಯನ್ನು ನಿಷೇಧಿಸಲು ಸಾಧ್ಯವಿಲ್ಲ. ಎಷ್ಟೇ ಮುನ್ನೆಚ್ಚರಿಕೆ ತೆಗೆದುಕೊಂಡರೂ ಅದು ಸಾಕಾಗುವುದಿಲ್ಲ. ಆದ್ದರಿಂದ ಸರ್ಕಾರದ ಜವಾಬ್ದಾರಿ ಕಡಿಮೆ ಇರುತ್ತದೆ. ಪರಿಹಾರ ಮಾತ್ರ ಯುದ್ಧೋಪಾದಿಯಲ್ಲಿ ಮಾಡಬೇಕಾಗುತ್ತದೆ. ಅದನ್ನು ಪ್ರಶ್ನಿಸಬಹುದು.

ಎರಡನೆಯದಾಗಿ, ಪ್ರಕೃತಿಯನ್ನು ಪ್ರಶ್ನಿಸಲು ಸಾಧ್ಯವಿಲ್ಲ. ಏಕೆಂದರೆ ಪ್ರಕೃತಿ ಚಲನಶೀಲವಾದರೂ ನಿರ್ಜೀವ. ನಮ್ಮ ಮಾತುಗಳಿಗೆ ಪ್ರತಿಕ್ರಿಯಿಸಲಾರದು. ಅಲ್ಲದೇ ಪ್ರಕೃತಿಗೆ ತನ್ನ ಚಟುವಟಿಕೆಗಳ ಮೇಲೆ ಸಂಪೂರ್ಣ ನಿಯಂತ್ರಣವೇನು ಇಲ್ಲ. ಅದು ಸಹಜವಾಗಿಯೇ ತನ್ನ ಒತ್ತಡವನ್ನು ಹೊರ ಚೆಲ್ಲುತ್ತದೆ.

ಹಾಗಾದರೆ ಸದ್ಗುರುವನ್ನೂ ಪ್ರಶ್ನಿಸಲು ಸಾಧ್ಯವಿಲ್ಲ. ಏಕೆಂದರೆ ಅವರು



**ಅಭಿಮತ**

ಸಹ ನಮ್ಮ ನಿಮ್ಮಂತೆ ಹುಲು ಮಾನವರು. ಅವರಿಗೂ ಈ ಅನಾಹುತ ತಡೆಯಲು ಸಾಧ್ಯವಿಲ್ಲ. ಕೆಲವರ ದೃಷ್ಟಿಯಲ್ಲಿ ಅವರು ದೇವಮಾನವರಾದರೂ ಅದು ಒಂದು ಅಂ–ದಭಕ್ತಿ ಮತ್ತು ಭ್ರಮೆ ಅಷ್ಟೇ.. ನಿಜಕ್ಕೂ ನಾವು ಪ್ರಶ್ನಿಸಬೇಕಾಗಿರುವುದು ಇದೇ ಸದ್ಗುರು ಮತ್ತು ಅವರ ಅನುಯಾಯಿಗಳು ಸದಾ ಕಾಲ ಪ್ರಾರ್ಥಿಸುವ ಶಿವನನ್ನು. ಈಗ ನಾವು ಶಿವನನ್ನು ಪ್ರಶ್ನಿಸಿದರೆ ತಪ್ಪಾಗುತ್ತಿದೆಯೇ ?

ಅದು ದೈವ ವಿರೋಧಿ ಆಗುತ್ತದೆಯೇ?

ಅದು ಧರ್ಮ ವಿರೋಧಿಯಾಗುತ್ತದೆಯೇ ?

ಅದನ್ನು ನಿಮ್ಮ ವಿವೇಚನೆಗೆ ಬಿಡುತ್ತಾ..

ಮನುಷ್ಯರಾದ ನಾವು ನಮ್ಮ ಅರಿವಿನ ಮಿತಿಯಲ್ಲಿ ಸಾಧ್ಯವಾದಷ್ಟು ವಾಸ್ತವಕ್ಕೆ ಹತ್ತಿರವಾದ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕು, ಸಹಜತೆಯನ್ನು ಕಾಪಾಡಿಕೊಳ್ಳಬೇಕು.ಅತಿಯಾದನಿರೀಕ್ಷೆಗಳು, ಇಲ್ಲದ ಅಗೋಚರ ಶಕ್ತಿ, ಭ್ರಮೆಗಳಿಂದ ಹೊರಬಂದು ಅತ್ಯಂತ ಸಹಜವಾಗಿ ಜೀವಿಸಿದರೆ ನಮ್ಮ ನೋವು ಸಂಕಷ್ಟಗಳು ಒಂದಷ್ಟು ಕಡಿಮೆಯಾಗಬಹುದು. ಸದ್ಗುರು ಜಗ್ಗಿ ವಾಸುದೇವ ಅವರ ಕಣ್ಣೀರು ಮತ್ತು ದುಃಖ ಸಹಜವಾದದ್ದು. ಆದರೆ ಶಿವನನ್ನು ತೋರಿಸಿ ಭ್ರಮೆಗಳನ್ನು ಸೃಷ್ಟಿಸಿ ಕಾರ್ಪೊರೇಟ್ ಶೈಲಿಯಲ್ಲಿ ಹಣ ಮಾಡುವುದು ವಂಚನೆ. ಮನುಷ್ಯ ತನ್ನ ಆಂತರಿಕ ಅರಿವಿನಿಂದ ಆತನ ನೋವುಗಳನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಕಷ್ಟಗಳು ಹಾಗೆಯೇ ಇರುತ್ತವೆ. ಆದರೆ ಅವುಗಳ ತೀವ್ರತೆಯನ್ನು ನಾವು ಸ್ಥಿತಪ್ರಜ್ಞತೆಯಿಂದ ಕಡಿಮೆ ಮಾಡಿಕೊಳ್ಳಬಹುದು. ಆದರೆ ಕಾರ್ಪೊರೇಷನ್ ಆಧ್ಯಾತ್ಮಿಕ ಚಿಂತನೆಯಿಂದ ಸಹಜ ನೋವುಗಳು ಇನ್ನಷ್ಟು ತೀವ್ರವಾಗಿ ಆಘಾತ ಉಂಟುಮಾಡುತ್ತದೆ. ಏಕೆಂದರೆ ನಾವು ಸಹಜತೆಯಿಂದ ದೂರ ಸರಿಯುವಂತೆ, ಅವರ ಮೇಲೆಯೇ ಅವಲಂಬಿತವಾಗುವಂತೆ ಈ ದೇವಮಾನವರು ಭ್ರಮೆಗಳನ್ನು ಸೃಷ್ಟಿಸುತ್ತಾರೆ. ಈ ಜಗತ್ತು ಸೃಷ್ಟಿಯಾದಂದಿನಿಂದ ಈ ರೀತಿಯ ಪ್ರಾಕೃತಿಕ ವಿಕೋಪಗಳು ಜೀವರಾಶಿಯ ಸಹಜ ಜೀವನ ಕ್ರಮದ ಭಾಗವಾಗಿಯೇ ಇದೆ. ಇದರ ಮೇಲೆ ಸಂಪೂರ್ಣ ನಿಯಂತ್ರಣ ಇನ್ನೂವರೆಗೂ ಸಾಧ್ಯವಾಗಿಲ್ಲ. ಕೆಲವು ಮುನ್ನೆಚ್ಚರಿಕೆ ಮತ್ತು ಪರಿಹಾರ ಕ್ರಮಗಳಲ್ಲಿ ಒಂದಷ್ಟು ಸುಧಾರಣೆಯಾಗಿದೆ. ಜೊತೆಗೆ ಪರಿಸರದಲ್ಲಿ ಇದು ಸಹಜವಾದರೂ ಹಿಂದೆ ಜನಸಂಖ್ಯೆ ಕಡಿಮೆ ಇದ್ದ ಕಾರಣ ಈ ಅವಘಡಗಳಿಗೆ ಮನುಷ್ಯ ಸಿಕ್ಕಿ ಬೀಳುತ್ತಿರಲಿಲ್ಲ. ಈಗ ಅತಿಯಾದ ಜನಸಂಖ್ಯೆಯ ಕಾರಣ ಅವನ ವಾಸ ಸ್ಥಳಗಳು ವಿಸ್ತರಿಸುತ್ತಾ ಹೋಗಿರುವುದರಿಂದ ಮನುಷ್ಯ ಸಾವು ನೋವಿಗೆ ತುತ್ತಾಗುತ್ತಿದ್ದಾನೆ. ಈ ಸಹಜ ಅರಿವು ನಮ್ಮಲ್ಲಿ ಉಂಟಾದಾಗ ನಮ್ಮ ಹತ್ತಿರದವರ ಸಾವು ನೋವುಗಳಿಗೆ ನಮ್ಮ ಪ್ರತಿಕ್ರಿಯೆ ಸ್ವಲ್ಪ ಮಟ್ಟಿಗೆ ನಮ್ಮ ನೋವನ್ನು ಕಡಿಮೆ ಮಾಡಬಹುದು.

ಏನೇ ಆಗಲಿ ಮೌಢ್ಯದ ನಂಬಿಕೆಗಳಿಗಿಂತ ಅರಿವಿನ ವಾಸ್ತವಿಕ ಪ್ರಜ್ಞೆ ಹೆಚ್ಚು ಪ್ರಯೋಜನಕಾರಿ ಮತ್ತು ಉಪಯುಕ್ತ. ಅದು ನಮ್ಮನ್ನು ಇಂದಿನ ಸಂಘರ್ಷಮಯ ಬದುಕಿನಲ್ಲಿ ಜೀವಿಸಲು ನಮ್ಮ ಜೀವನದ ಗುಣಮಟ್ಟ ಹೆಚ್ಚಿಸಲು ಸಹಕಾರಿಯಾಗಿದೆ ಎಂಬುದು ಸತ್ಯ.. ಎಲ್ಲಾ ಜಾತಿ ಧರ್ಮಗಳ ದೇವಮಾನರುಗಳು ಈ ಭ್ರಮೆಯಿಂದ ಹೊರ ಬಂದು, ಈ ಮಣ್ಣಿನ ದಾರ್ಶನಿಕರ ಚಿಂತನೆಗಳನ್ನು ಜನರಿಗೆ ವಾಸ್ತವ ನೆಲೆಯಲ್ಲಿ ತಲುಪಿಸಿದರೆ ಉತ್ತಮ. ಕಾರ್ಪೊರೇಟ್ ಶೈಲಿಯ ಆಧ್ಯಾತ್ಮಿಕತೆ ದಂಧೆ ಆಗಬಾರದು. ಅದು ಅರಿವಿನ ಅನುಭವ ಮಂಟಪವಾಗಬೇಕು.

ವಿವೇಕಾನಂದ. ಎಚ್. ಕೆ.
ಚಿಂತಕರು, ಲೇಖಕರು
ಬೆಂಗಳೂರು





## ಮಹಾತ್ಮರ ಹಾದಿಯಲ್ಲಿ ನಡೆಯೋಣ: ಭಗವಂತ್ರಾಯ ಬೆಣ್ಣೂರ

ಜೇವರ್ಗಿ: ಸಮಾಜದಲ್ಲಿ ಸಮಾನತೆ, ಸೌಹಾರ್ದತೆಗಾಗಿ ತೋರಿಸಿಕೊಟ್ಟ ಹಾದಿಯಲ್ಲಿ ಪ್ರತಿಯೊಬ್ಬರೂ ಮುನ್ನಡೆಯೋಣ ಎಂದು ಪ್ರಗತಿಪರ ಚಿಂತಕ ಭಗವಂತ್ರಾಯ ಬೆಣ್ಣೂರ ಅಭಿ. ಪ್ರಾಯಪಟ್ಟರು.

ಪಟ್ಟಣದ ಮಿನಿ ವಿಧಾನಸೌಧ ತಾಲ್ಲೂಕಾಡಳಿತದ ಆವರಣದಲ್ಲಿ ವತಿಯಿಂದ ನಡೆದ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಹಾಗೂ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮದಲ್ಲಿ ಮಹನೀಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು. ನಾರಾಯಣ ಗುರು ಮನುಕುಲದ ಉದ್ಧಾರಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಮಹಾಸಂತ, ಶರಣ ನುಲಿಯ ಚಂದಯ್ಯ ಜನಿಸಿ ಬಸವ–ಕಲ್ಯಾಣದಲ್ಲಿ ವಿಶ್ವಗುರು ಬಸವಣ್ಣ–ನವರ ನೇತೃತ್ವದಲ್ಲಿ ನಡೆದ ಶರಣರ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಾರಾಯಣಗುರು, ನುಲಿಯ ಚಂದಯ್ಯರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಲಾಯಿತು ಗ್ರೇಡ್ 2 ತಹಶೀಲ್ದಾರ್ ಟಿಪ್ಪು ಸುಲ್ತಾನ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾ–ರಿಗಳು, ತಾಲ್ಲೂಕು ಆರ್ಯ ಈಡಿಗರ ಸಂಘದ ಅಧ್ಯಕ್ಷ ನಾಗರಾಜ ಗುತ್ತೇದಾರ ಪ್ರಧಾನ ಕಾರ್ಯದರ್ಶಿ ಭೀಮಯ್ಯ ಗುತ್ತೇದಾರ ಸೊನ್ನ, ಸಮಾಜದ ಮುಖಂಡರಾದ ಶಿವರಾಜ ಗುತ್ತೇದಾರ, ವೆಂಕಯ್ಯ ಗುತ್ತೇದಾರ, ರಾಜಶೇಖರ ಗುತ್ತೇದಾರ ಅವರಾದ, ದೇವೇಂದ್ರ ಗುತ್ತೇದಾರ, ಮಂಜುನಾಥ ಗುತ್ತೇದಾರ, ನಿವೃತ್ತ ಶಿಕ್ಷಕರಾದ ರಮೇಶ ಗುತ್ತೇದಾರ, ಹುಲಗಯ್ಯ ಗುತ್ತೇದಾರ, ಜಾನಾಸಾ ಗುತ್ತೇದಾರ, ನುಲಿಯಿ ಚಂದಯ್ಯ ಸಮಾಜದ ಅಧ್ಯಕ್ಷ ಮಲ್ಲಿಕಾರ್ಜುನ ಭಜಂತ್ರಿ, ದತ್ತು ಭಜಂತ್ರಿ ಹರವಾಳ, ಶಾಂತಪ್ಪ ಭಜಂತ್ರಿ, ಮಲ್ಲಿಕಾರ್ಜುನ ಭಜಂತ್ರಿ ಹಿಪ್ಪರಗಿ, ಈರಣ್ಣ ಭಜಂತ್ರಿ, ಯಲ್ಲಪ್ಪ ಭಜಂತ್ರಿ, ಶಿವಶರಣಪ್ಪಾ ಭಜಂತ್ರಿ, ಮುದುಕಪ್ಪ ಭಜಂತ್ರಿ, ಸಂಗಮೇಶ ಭಜಂತ್ರಿ ಭಾಗವಹಿಸಿದ್ದರು.



ಕಲಬುರಗಿ: ಶ್ರಾವಣಮಾಸದ ಮೂರನೇಯ (ನಡುವಿನ ) ಸೋಮವಾರದ ನಿಮಿತ್ತ ಇಂದು ನಗರದ ಮಹಾದಾಸೋಹಿ ಶರಣಬಸವೇಶ್ವರ ದೇವಸ್ಥಾನಕ್ಕೆ ತೆರಳಿದ ಅಸಂಖ್ಯಾತ ಭಕ್ತಾದಿಗಳು ದರ್ಶನ ಪಡೆದು ಪುನೀತರಾದರು.

## ಜೂಜಾಟ:ಐವರ ಬಂಧನ

ಕಲಬುರಗಿ:ನಗರದ ಗಂಜ್ ಏರಿಯಾದ ಹನುಮಾನ ಗುಡಿ ಪಕ್ಕದ ಖುಲ್ಲಾ ಜಾಗದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಚೌಕ್ ಪೊಲೀಸ್ ಠಾಣೆ ಎಎಸ್‌ಐ ರಮೇಶ ಗುತ್ತೇದಾರ, ಸಿಬ್ಬಂದಿಗಳಾದ ಶಿವಾನಂದ, ಸುರೇಶ, ಶಿವಶರಣ ಅವರು ದಾಳಿ ನಡೆಸಿ ಐವರು ಜೂಜುಕೋರರನ್ನು ಬಂಧಿಸಿದ್ದಾರೆ.

ಮಲ್ಲಿಕಾರ್ಜುನ ಪರಸ್ಥಿ, ಜಗನಸಿಂಗ್ ರಜಪೂತ, ಅಶೋಕ ಬಿರಾದಾರ, ಚಂದ್ರಕಾಂತ ಕಣಜಗಿ, ಕಾಶಿನಾಥ ರೋಡೆ ಎಂಬುವವರನ್ನು ಬಂಧಿಸಿ 15,100 ರೂ.ನಗದು, 52 ಇಸ್ಪೀಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ. ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಮ್ಮಾರ ಸಮುದಾಯಕ್ಕೆ ಎಸ್ಟಿ ಮೀಸಲಾತಿ ಪ್ರತ್ಯೇಕ ನಿಗಮಕ್ಕೆ: ಲೋಹಾರ ಆಗ್ರಹ

ಆಳಂದ: ರಾಜ್ಯಾದ್ಯಂತದ ಕಮ್ಮಾರ ಸಮುದಾಯದ ನೂರಾರು ಬಾಂಧವರು ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ಜಮಾಯಿಸಿ, ತಮ್ಮ ದಶಕಗಳ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕನಾಟಕ ರಾಜ್ಯ ಕಮ್ಮಾರ ಸಂಘಗಳ ಒಕ್ಕೂಟದ ರಾಜ್ಯ ಗೌರವ ಅಧ್ಯಕ್ಷ ರಮೇಶ ಲೋಹಾರ ಅವರು ನೇತೃತ್ವದಲ್ಲಿ ರಾಜ್ಯ ಸರ್ಕಾರಕ್ಕೆ ಬೇಡಿಕೆಯ ವಿಶೇಷ ಮನವಿಪತ್ರ ಸಲ್ಲಿಸಿ ಒತ್ತಾಯಿಸಿದರು.

ಪ್ರತಿಭಟನಾ ಸ್ಥಳಕ್ಕೆ ಪರಿಶಿಷ್ಟ ಪಂಗಡಗಳ (ಎಸ್‌ಟಿ) ಇಲಾಖೆಯ ರಾಜ್ಯ ಜಂಟಿ ನಿರ್ದೇಶಕ ರೆಡ್ಡಿ ಅವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.

ಒಕ್ಕೂಟದ ರಾಜ್ಯ ಗೌರವ ಅಧ್ಯಕ್ಷ ರಮೇಶ ಲೋಹಾರ ಅವರು ಮಾತನಾಡಿ, 'ಕರ್ನಾಟಕ ವಿಶ್ವಕರ್ಮ ಅಭಿವೃದ್ಧಿ ನಿಗಮ'ದಿಂದ ಕಮ್ಮಾರ ಸಮುದಾಯವನ್ನು ಬೇರ್ಪಡಿಸಿ, ಪ್ರತ್ಯೇಕವಾಗಿ 'ಕರ್ನಾಟಕ ರಾಜ್ಯ ಕಮ್ಮಾರ ಅಭಿವೃದ್ಧಿ ನಿಗಮ' ಸ್ಥಾಪಿಸಬೇಕೆಂದು ಒತ್ತಾಯಿಸಿದರು.

ಬಸವಣ್ಣನವರ ಕಾಯಕ ಸಿದ್ಧಾಂತಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿರುವ ಈ ಸಮುದಾಯ, ಇಂದಿಗೂ ರಾಜ್ಯಾದ್ಯಂತ ಸುಮಾರು 5 ಲಕ್ಷಕ್ಕೂ ಅಧಿಕ ಕುಟುಂಬಗಳನ್ನುಹೊಂದಿದ್ದು,ಗ್ರಾಮೀಣ ಆರ್ಥಿಕತೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಪ್ರಸ್ತುತ ಕಮ್ಮಾರ ಸಮುದಾಯವನ್ನು ವಿಶ್ವಕರ್ಮ ನಿಗಮದ ವ್ಯಾಪ್ತಿಗೆ ಸೇ–ರಿಸಲಾಗಿದ್ದು, ಈ ನಿಗಮದಡಿ ಐದು ವಿವಿಧ ಕುಶಲಕರ್ಮಿ ಸಮುದಾಯಗಳು ಒಟ್ಟಾಗಿರುವುದರಿಂದ ಅನುದಾನ ಹಂಚಿಕೆ ಮತ್ತು ಯೋಜನೆಗಳ ಅನುಷಾಟನದಲ್ಲಿ ತಮಗೆ ಅನ್ಯಾಯವಾಗುತ್ತಿದೆ ಎಂದು ಅವರು

ದಕ್ಷಿಣ ಕನ್ನಡ ಮತ್ತು ಚಾಮರಾಜ ಜಿಲ್ಲೆಗಳಲ್ಲಿ ಈಗಾಗಲೇ ಕಮ್ಮಾರ ಸಮುದಾಯವನ್ನು ಪರಿಶಿಷ್ಟ ಪಂಗಡದಲ್ಲಿ (ಎಸ್‌ಟಿ)ಕ್ಕೆ ಇದ್ದಂತೆ, ಇದೇ ಮಾದ–ರಿಯಲ್ಲಿ ರಾಜ್ಯಾದ್ಯಂತ ಇರುವ ಕಬ್ಬಿಣ ಕೆಲಸ ಮಾಡುವ ಕಮ್ಮಾರರನ್ನೂ ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆ ಉದ್ದೇಶಿಸಿ ಕರ್ನಾಟಕ ರಾಜ್ಯ ಕಮ್ಮಾರ ಸಂಘದ ಅಧ್ಯಕ್ಷ ಜಿ.ಟಿ.ರಂಗಸ್ವಾಮಿ ಮಾತನಾಡಿ, ಕಮ್ಮಾರರ ವೃತ್ತಿ ಮತ್ತು ಸವಾಲುಗಳು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ವಿಶಿಷ್ಟವಾಗಿರುವುದ–



ರಿಂದ ಸಾಮಾನ್ಯ ಯೋಜನೆಗಳಿಂದ ತಮ್ಮ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ ಎಂಬುದು ಅವರ ವಾದಿಸಿದರು.

ಅಧಿಕಾರಿಗಳಿಗೆ ಬೇಡಿಕೆಯ ಕುರಿತು ಮುಖಂಡರು, ವಿಶ್ವಕರ್ಮ ನಿಗಮದಿಂದ ಬೇರ್ಪಡಿಸಿ ಪ್ರತ್ಯೇಕ ಬಜೆಟ್ ಹಾಗೂ ಆಡಳಿತ ಮಂಡಳಿ ರಚನೆ, ಪವರ್ ಹ್ಯಾಮರ್, ವೆಲ್ಡಿಂಗ್ ಯಂತ್ರ, ಇಂಡಕ್ಷನ್ ಫರ್ನೇಸ್ ಖರೀದಿಗೆ ಶೇ. 80ರಷ್ಟು ಸಬ್ಸಿಡಿ, ಶೇ. 3–4ರ ಬಡ್ಡಿದರದಲ್ಲಿ 10 ಲಕ್ಷದಿಂದ 25 ಲಕ್ಷದವರೆಗೆ ಸಾಲ; ಹೊಸ ಪಟಸಾಲೆ ಸ್ಥಾಪನೆಗೆ ಶೇ. 50 ಸಬ್ಸಿಡಿಯೊಂದಿಗೆ 10 ಲಕ್ಷದವರೆಗೆ ಸಾಲ; ಕಚ್ಚಾ ಸಾಮಗ್ರಿ ಖರೀದಿಗೆ ಶೂನ್ಯ ಬಡ್ಡಿ ಸಾಲ, 5 ಲಕ್ಷದ ಉಚಿತ ಆರೋಗ್ಯ ವಿಮೆ ಹಾಗೂ 60 ವರ್ಷ ಮೇಲ್ಪಟ್ಟ ಕುಶಲಕರ್ಮಿಗಳಿಗೆ ಮಾಸಿಕ 4,000 ಪಿಂಚಣಿ, ಕೃಷಿ, ಅರಣ್ಯ, ನೀರಾವರಿ ಹಾಗೂ ಸಾರಿಗೆ ಇಲಾಖೆಗಳು ಅಗತ್ಯವಿರುವ ಕಬ್ಬಿಣದ ಸಾಮಗ್ರಿಗಳನ್ನು ನೋಂದಾಯಿತ ಕಮ್ಮಾರರಿಂದಲೇ ಖರೀದಿಸುವ ಕಡ್ಡಾಯ ಆದೇಶ, ಬೆಳಗಾವಿ, ಬಳ್ಳಾರಿ, ಮೈಸೂರು, ಶಿವಮೊಗ್ಗ ಹಾಗೂ ಕಲಬುರಗಿಯಲ್ಲಿ ಐದು 'ಕಮ್ಮಾರ ಸಿಎಸಿ ಕ್ಲಸ್ಟರ್' ಸ್ಥಾಪನೆಯಾಗಬೇಕು. ಐಟಿಐ, ಡಿಪ್ಲೊಮಾ, ಮೆಕ್ಯಾನಿಕಲ್ ಎಂಜಿನಿಯ–ರಿಂಗ್ ವಿದ್ಯಾರ್ಥಿಗಳಿಗೆ ಮಾಸಿಕ 8,000 ಶಿಷ್ಯವೇತನ; ಐಐಟಿ, ಎಐಟಿ ಅಥವಾ ವಿದೇಶಿ ವಿಶ್ವವಿದ್ಯಾಲಯ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ 15 ಲಕ್ಷದವರೆಗೆ ಪ್ರೋತ್ಸಾಹಧನ, 'ಕರ್ನಾಟಕ ಮೆಟಲ್ ಆರ್ಟ್' ಬ್ರ್ಯಾಂಡ್ ಹೆಸರಿನಡಿ ಇ–ಕಾಮರ್ಸ್ ವೇದಿಕೆಗಳಲ್ಲಿ (ಅಮೆಜಾನ್, ಫಿಡಂಕಾರ್ಟ್) ಕೈಉತ್ಪನ್ನ ಪ್ರದರ್ಶನಕ್ಕೆ ಡಿಜಿಟಲ್ ವೇದಿಕೆ ನಿರ್ಮಾಣ, ಚಾಮರಾಜನಗರ ಮತ್ತು ರಾಜ್ಯಾದ್ಯಂತ ಹಂಚಿಹೋಗಿರುವ ಲಕ್ಷಾಂತರ ಕಮ್ಮಾರ ಕುಟುಂಬಗಳ ಅಸ್ತಿತ್ವ ಮತ್ತು ಆರ್ಥಿಕ ಪುನಶ್ಚೇತನಕ್ಕಾಗಿ ಪ್ರತ್ಯೇಕ ನಿಗಮ ಸ್ಥಾಪಿಸಿ ಅಗತ್ಯ ಅನುದಾನ ಕಾಯ್ದಿರಿಸಬೇಕೆಂದು ಸಮಸ್ತ ಸಮುದಾಯದ ಪರವಾಗಿ ಮುಖ್ಯಮಂತ್ರಿಗಳಲ್ಲಿ ಮನವಿ ಸಲ್ಲಿಸಿ ಸರ್ಕಾರ ತಮ್ಮ ಬೇಡಿಕೆಗಳಿಗೆ ಶೀಘ್ರ ಸ್ಪಂದಿಸಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿ ಮನವಿ ಸಲ್ಲಿಸಿದ್ದಾರೆ.


ಈ ಬಂತೇ ಅಮರಜ್ಯೋತಿ ಅವರು ಪ್ರತಿಭಟನೆಗೆ ಬೆಂಬಲಿಸಿ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮಾತನಾಡಿದರು.

ಕಮ್ಮಾರ ಸಂಘದ ಕಲಬುರಗಿ ಜಿಲ್ಲಾಧ್ಯಕ್ಷ ಮಹಾರುದ್ರ ಕಮ್ಮಾರ, ಮೈಸೂರು ಜಿಲ್ಲಾಧ್ಯಕ್ಷ ಮಂಜುನಾಥ, ಪ್ರಧಾನ ಕಾರ್ಯದರ್ಶಿ ಮಹಾದೇವ, ಡಾ. ದಾಕ್ಷಾಯಣಿ ಮದ್ದುರ್, ರವಿಕುಮಾರ, ಶೇಖರ ಮೈಸೂರು, ಬೆಳ್ಳ ಶೆಟ್ಟರು, ಬಿ. ವಿಜಯಸಿಂಹ, ಗೋಪಾಲ, ಲಿಂಗರಾಜ ಕಮ್ಮಾರ, ಡಾ. ಮಹೇಶ, ಶಂಕರ, ಲಿಂಗರಾಜ್ ಕೊಳ್ಳೇಗಾಲ, ಸೋನು ಕುಮಾರ್,ಸಿದ್ದರಾಜು,ರಾಚಪ್ಪ ಉಡಿಗಾಲ, ರಾಜು ಟಿ ನರಸೀಪುರ, ಸಿದ್ದಪ್ಪ ಟಿ ನರಸೀಪುರ, ಮಾಯಿ ಮೈಸೂರ್, ನಂಜುಂಡ ಶೆಟ್ಟಿ, ಗೋವಿಂದಪ್ಪ ನಂಜನಗೂಡು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಮುದಾಯ ಬಾಂಧವರು ಭಾಗವಹಿಸಿದ್ದರು ಎಂದು ಕಮಾರ ಒಕ್ಕೂಟು ತಿಳಿಸಿದೆ.

## ಅಪ್ಪಾ ಪಬ್ಲಿಕ್ ಶಾಲೆಯಲ್ಲಿ ವಿದ್ಯಾರ್ಥಿಗಳ ಕಲಿಕಾ ಮೇಳ

ಕಲಬುರಗಿ:ಲಿಂಗೈಕ್ಯವಿದ್ಯಾಭಂಡಾರಿಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರ ಪುಣ್ಯಸ್ಮರಣೋತ್ಸವವನ್ನು ಸ್ಮ–ರಿಸಲುಆಯೋಜಿಸಲಾದತಿಂಗಳಕಾಲದಕಾರ್ಯಕ್ರಮಗಳ ಅಂಗವಾಗಿ, ಅಪ್ಪಾ ಪಬ್ಲಿಕ್ ಶಾಲೆಯಲ್ಲಿ ಬಾಲವಾಟಿ–ಕೆಯಿಂದ 5ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗಾಗಿ ಅಪ್ಪಾ ಪಬ್ಲಿಕ್ ಶಾಲೆಯಲ್ಲಿ ಎಕೆಜಿ ಯಿಂದ (Kinder-garten) 5ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಶೈಕ್ಷಣಿಕ ಪ್ರದರ್ಶನವನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಈ ಪ್ರದರ್ಶನವು ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ಪ್ರದರ್ಶಕ ಕಲಿಕೆಯ ಪ್ರತಿರೂಪವಾಗಿತ್ತು.

ಈ ಪ್ರದರ್ಶನವನ್ನು ಪೂಜ್ಯ ದೊಡ್ಡಪ್ಪಾಜಿ ಎಸ. ಅಪ್ಪಾ (9ನೆಯ ಪೀಠಾಧಿಪತಿ, ಶರಣಬಸವೇಶ್ವರ ಸಂಸ್ಥಾನ, ಕಲಬುರಗಿ), ಡಾ. ಅಲ್ಲಮಪ್ರಭು ದೇಶಮುಖ್ (ಆಡಳಿತಾಧಿಕಾರಿ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರಗಿ) ಶಾಲೆಯ ಪ್ರಾಂಶುಪಾಲರು ಶ್ರೀ ಶಂಕರಗೌಡ ಹೊಸಮನಿ ಮತ್ತು ಉಪಪ್ರಾಂಶುಪಾಲರಾದ ಶ್ರೀ ವಿಜು ಕಲ್ಲಾರ ಜೋಸ್ ಅವರ ಉಪಸ್ಥಿತಿಯಲ್ಲಿ ಜ್ಯೋತಿ ಪ್ರಜ್ವಲಿಸಿ ಪ್ರದರ್ಶನಕ್ಕೆ ಚಾಲನೆ ನೀಡಿದರು.



ತರಗತಿಗಳ ವಿದ್ಯಾರ್ಥಿಗಳು ಸಿದ್ಧಪಡಿಸಿದ ವ್ಯಾಪಕ ಶ್ರೇಣಿಯ ಮಾಹಿತಿ ಮತ್ತು ಸೃಜನಶೀಲ ಮಾದರಿಗಳನ್ನು ಪ್ರದರ್ಶಿಸಲಾಯಿತು. ಪ್ರಾಥಮಿಕ ಪೂರ್ವ ಮತ್ತು ಹಿರಿಯ ಪ್ರಾಥಮಿಕ ವಿದ್ಯಾರ್ಥಿಗಳು ತಮ್ಮ ಪ್ರದರ್ಶನಗಳು ಮತ್ತು ಪ್ರಸ್ತುತಿಗಳ ಮೂಲಕ ಶೈಕ್ಷಣಿಕ ಪರಿಕಲ್ಪನೆಗಳ ಜ್ಞಾನವನ್ನು ಪ್ರದರ್ಶಿಸುವುದರ ಜೊತೆಗೆ ಸೃಜನಶೀಲತೆ, ಆತ್ಮವಿಶ್ವಾಸ ಮತ್ತು ತಂಡದ ಕೆಲಸವನ್ನು (teamwork) ಪ್ರದರ್ಶಿಸಿದರು.ಈ ದಿಸೆಯಲ್ಲಿವಿದ್ಯಾರ್ಥಿಗಳು ಪಠ್ಯಪುಸ್ತಕದಿಂದಾಚೆಯ ತಮ್ಮ ಆಲೋಚನೆಗಳನ್ನು ಅನ್ವೇಷಿಸಿ ತಮ್ಮದೆಯಾದ ಶೈಲಿಯಲ್ಲಿ ಪ್ರದರ್ಶಿಸಿದ್ದುನೋಡುಗರ ಮೆಚ್ಚುಗೆಗೆ ಪಾತ್ರರಾದರು.

ಪ್ರಾಥಮಿಕ ಪೂರ್ವ (ಕೆಜಿ) ವಿದ್ಯಾರ್ಥಿಗಳು ಅಕ್ಷರ ಮಾಲೆ, ದೈನಂದಿನ ಸಹಾಯಗಾರರು, ಆರೋಗ್ಯಕರ ಆಹಾರ, ಸಾಂಪ್ರದಾಯಕ ಹಬ್ಬಗಳು, ಪ್ರಮುಖ ಋತುಗಳಲ್ಲಿ (ಬೇಸಿಗೆ ಕಾಲ, ಮಳೆಗಾಲ, ಚಳಿಗಾಲ) ಬದಲಾಗುವ ಉಡುಪು, ಆಹಾರ ಮತ್ತು ಇತರ ಜೀವನಶೈಲಿಗಳನ್ನು ತುಂಬಾ ಆಕರ್ಷಕವಾಗಿ ಪ್ರದರ್ಶಿಸಿ, ಬಂದಂತಹ ಪ್ರೇಕ್ಷರ ಮನಸಳೆದರು. ಹಿರಿಯ ಪಾರ್ಥಮಿಕ ವಿದ್ಯಾರ್ಥಿಗಳು ಕೂಡ ತಮ್ಮ ಎಲ್ಲಾವಿಷಯವಾರು ಪಠ್ಯಪುಸ್ತಕಗಳಲ್ಲಿ ಅಧ್ಯಯನ ಮಾಡಿದ ಪರಿಕಲ್ಪನೆಗಳನ್ನು ಪ್ರಾಯೋಗಿಕವಾಗಿ ಪ್ರದರ್ಶಿಸಿ ವಿವರಣೆ ನೀಡುವುದು ವಿಶೇಷವಾಗಿ–ತ್ತು. ಒಟ್ಟಿನಲ್ಲಿ ಸುಮಾರು 1000 ವಿಧ್ಯರ್ಥಿಗಳು ಈ ಪ್ರದರ್ಶನದಲ್ಲಿ ಪಾಲ್ಗೊಂಡು ಪ್ರದರ್ಶನಕ್ಕೆ ಮೆರಗು ತಂದುಕೊಟ್ಟರು. ಇವರಲ್ಲಿ ಪೂಜ್ಯ ದೊಡ್ಡಪ್ಪ ಅಪ್ಪಾಜಿಯವರುಕೂಡ ತಮ್ಮ ನಾಲ್ಕನೆಯ ತರಗತಿಯಸಹಪಾಠಿಗಲರೊಂದಿಗೆ: ಶೌರ್ಯಾ ದೇವರಗುಡಿ &ಆರಾವ್ ಪಟೇಲ್, ಭಾಗವಹಿಸಿ ಭಾರತದ ಭೂಆಕೃತಿಗಳ ವಿವರಣೆ, ಸುಂದರ ಭೌಗೋಳಿಕ ವೈಶಿಷ್ಟ್ಯಗಳ ಚಿತ್ರವನ್ನು ಉಲ್ಲೇಖಿಸಿ ವಿವ–ರಿಸಿದ್ದು, ಎಂದು ಹೇಳಿದರು.

# ಪ್ರತಿ ಶನಿವಾರ & ರವಿವಾರ ಓಟಗಾರರಿಗೆ ಉಚಿತ ತರಬೇತಿ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಯೋಗ ತರಬೇತುದಾರ, ಮ್ಯಾರಾಥಾನ್ ಓಟಗಾರ ಹಾಗೂ ಅಲ್ಟ್ರಾ ರನ್ನರ್ ರೇಣುಕಾ ಪ್ರಸಾದ ಅವರು ಸೆಪ್ಟೆಂಬರ್ ಮೊದಲ ವಾರದಿಂದ ಡಿಸೆಂಬರ್ ಮೊದಲ ವಾರದ ವರೆಗೆ ಪ್ರತಿ ಶನಿವಾರ ಮತ್ತು ರವಿವಾರ ನಗರದಲ್ಲಿ ಉಚಿತ ತರಬೇತಿ ನೀಡಲಿದ್ದಾರೆ.

ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಹೊಸ ಕ್ಯಾಂಪಸ್ ನಲ್ಲಿರುವ ಎ.ಎಸ್.ಪಿ ಕಾಮರ್ಸ್ ಕಾಲೇಜಿನ ಕ್ರೀಡಾಂಗಣದಲ್ಲಿ ಶನಿವಾರ ಮತ್ತು ರವಿವಾರ ಬೆಳಿಗ್ಗೆ 6 ಗಂಟೆಗೆ ತರಬೇತಿ ನೀಡಲಿದ್ದಾರೆ. ವೃಕ್ಷಥಾನ್ ಹೆರಿಟೇಜ್ ರನ್– 2026ರಲ್ಲಿ ನಡೆಯಲಿರುವ 10 ಕಿ. ಮೀ. ಮತ್ತು 21 ಕಿ. ಮೀ. ಓಟಗಳಲ್ಲಿ ಪಾಲ್ಗೊಳ್ಳುವವರು ಇದರ ಪ್ರಯೋಜನ ಪಡೆಯಬಹುದಾಗಿದೆ.

ರೇಣುಕಾ ಪ್ರಸಾದ ಅವರು ಭಾರತದಾದ್ಯಂತ ನಡೆದ ಹಲವು ಪ್ರತಿಷ್ಠಿತ ಓಟದ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದು, ಬೆಂಗಳೂರು ಮ್ಯಾರಥಾನ್ ಮತ್ತು ಮುಂಬೈ ಮ್ಯಾರಥಾನ್ ಸೇರಿದಂತೆ ಹಲವಾರು ಪ್ರಮುಖ ಮ್ಯಾರಥಾನ್‌ಗಳಲ್ಲಿ ಅಧಿಕೃತ ಪೇಸರ್ ಆಗಿ ಪಾಲ್ಗೊಂಡಿದ್ದಾರೆ. ಅಲ್ಲದೇ, ಅವರ 18ಕ್ಕೂ ಹೆಚ್ಚು ವರ್ಷಗಳ ಓಟದ ಅನುಭವದೊಂದಿಗೆ ಓಟಗಾರರಿಗೆ ಸರಿಯಾದ ವೇಗ, ತರಬೇತಿ ಮತ್ತು ಓಟದ ತಂತ್ರಗಳನ್ನು ಬೆಳೆಸಲು ಮಾರ್ಗದರ್ಶನ ನೀಡುತ್ತಿದ್ದಾರೆ. ಅಲ್ಲದೇ, ಕಳೆದ 20 ವರ್ಷಗಳಿಂದ ಸಾಫ್ಟ್‌ವೇರ್ ಎಂಜಿನಿಯರ್ ಆಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ಓಟವೆಂದರೆ ನಿರಂತರತೆ, ಶಿಸ್ತು, ದೈಹಿಕ ಸಾಮರ್ಥ್ಯ ಮತ್ತು ಸಂತೋಷದಿಂದ ಸಾಗುವ ಒಂದು ಪಯಣವಾಗಿದೆ. ಓಡಲು ಸಾಧ್ಯವಾದಾಗ ಓಡಿ, ಸಾಧ್ಯವಾಗದಿದ್ದರೆ ನಡೆಯಿರಿ, ಅಗತ್ಯವಿದ್ದರೆ ತೆವಳಿಯಾದರೂ ಸರಿ, ಆದರೆ ಎಂದಿಗೂ ಕೈಬಿಡಬೇಡಿ. ಕ್ರಮಬದ್ಧ ಮತ್ತು ಹಂತ ಹಂತವಾಗಿ ಹೆಚ್ಚಿಸುವ ತರಬೇತಿ ಉತ್ತಮ ಓಟದ ಸಾಮರ್ಥ್ಯವನ್ನು ಬೆಳೆಸುವುದರ ಜೊತೆಗೆ, ಗಾಯಗಳ ಅಪಾಯವನ್ನು ಕಡಿಮೆ ಮಾಡಿ, ಓಟದ ಪಯಣವನ್ನು ಹೆಚ್ಚು ಸಂತೋಷದಾಯಕವಾಗಿಸುತ್ತದೆ ಎಂಬುದು ಅವರ ಅಭಿಪ್ರಾಯವಾಗಿದೆ.

# ಉಪಾಧ್ಯಕ್ಷೆಯಾಗಿ ಗೀತಾ ರಾಠೋಡ ನೇಮಕ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ಬಿಜೆಪಿ ಇಂಡಿ ಮಂಡಲ ಮಹಿಳಾ ಮೋರ್ಚಾ ಉಪಾಧ್ಯಕ್ಷರಾಗಿ ಹಿರೇಬೇವನೂರ ತಾಂಡಾ ನಿವಾಸಿ ಗೀತಾ ವಿವೇಕಾನಂದ ರಾಠೋಡ ಅವರನ್ನು ನೇಮಕ ಮಾಡಿ ಮಹಿಳಾ ಮೋರ್ಚಾ ಅಧ್ಯಕ್ಷ ಬಸಮ್ಮ ಮರಡಿ ಆದೇಶ ಹೊರಡಿಸಿದ್ದಾರೆ.

ಪಕ್ಷದ ಬಲವರ್ಧನೆಗೆ ಸದಾ ಶ್ರಮಿಸಿ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಬೇಕೆಂದು ಆದೇಶ ಪತ್ರದಲ್ಲಿ ತಿಳಿಸಲಾಗಿದೆ.

# ಕ್ರೀಡೆ ಕೇವಲ ಮನರಂಜನೆಯಲ್ಲ ಸದೃಢ ಬದುಕಿನ ದಾರಿ: ಸವದಿ



■ ಉದಯರಶ್ಮಿ ದಿನಪತ್ರಿಕೆ

ಅಥಣಿ: ವಿದ್ಯಾರ್ಥಿ ಜೀವನದಲ್ಲಿ ಕ್ರೀಡೆಗೆ ಅತ್ಯಂತ ಮಹತ್ವದ ಸ್ಥಾನವಿದೆ ಕ್ರೀಡೆಯು ಕೇವಲ ಮನರಂಜನೆಯಲ್ಲ ಅದು ದೈಹಿಕ ಸದೃಢತೆ ಹಾಗೂ ಮಾನಸಿಕ ಬೆಳವಣಿಗೆಗೆ ಪೂರಕವಾಗಿದೆ ಎಂದು ಯುವ ಕಾಂಗ್ರೆಸ್ ಮುಖಂಡ ಚಿದಾನಂದ ಸವದಿ ಹೇಳಿದರು

ಅವರು ತಾಲೂಕಿನ ಸಪ್ತಸಾಗರದ ಶಾರದಾ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಯಲ್ಲಿ ಜರುಗಿದ ಜಿಲ್ಲಾ ಪಂಚಾಯತ ಬೆಳಗಾವಿ ಶಾಲಾ ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಅಥಣಿ ಮತ್ತು ಸಮೂಹ ಸಂಪನ್ಮೂಲ ಕೇಂದ್ರ ದರೂರ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 2026–27ನೇ ಸಾಲಿನ ದರೂರ ಕ್ಲಸ್ಟರ್ ಮಟ್ಟದ ಪ್ರೌಢ ಶಾಲಾ ಕ್ರೀಡಾಕೂಟಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕ್ಲಸ್ಟರ್ ಮಟ್ಟದ ಕ್ರೀಡಾಕೂಟಗಳು ಗ್ರಾಮೀಣ ಭಾಗದ ಪ್ರತಿಭೆಗಳಿಗೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಳ್ಳಲು ವೇದಿಕೆಯಾಗುತ್ತವೆ ಹೀಗೆ ಗ್ರಾಮೀಣ ಮಟ್ಟದಲ್ಲಿ ಕ್ರೀಡೆಗಳನ್ನು ಆಯೋಜಿಸುವುದರಿಂದ ಮಕ್ಕಳು ಬೆಳೆಯುವದರ ಜೊತೆಗೆ ಸದೃಢರಾಗುತ್ತಾರೆ ಜೊತೆಗೆ ಇಂತಹ ಶಿಕ್ಷಣ ಸಂಸ್ಥೆಗಳು ಕೂಡ ಬೆಳೆಯುತ್ತವೆ ಎಲ್ಲ ವಿದ್ಯಾರ್ಥಿಗಳು ಕ್ರೀಡಾ ಮನೋಭಾವದಿಂದ ಭಾಗವಹಿಸಿ ಯಶಸ್ಸು ಗಳಿಸಬೇಕು ಎಂದು ಕರೆ ನೀಡಿದರು.

ಶಿಕ್ಷಣ ಪ್ರೇಮಿ ಸಂಜಯ ನಾಡಗೌಡ ಮಾತನಾಡಿ, ಪೋಷಕರು ಮತ್ತು ಶಿಕ್ಷಕರು ಮಕ್ಕಳನ್ನು ಕ್ರೀಡೆಯಲ್ಲಿ ಹೆಚ್ಚು ಪ್ರೋತ್ಸಾಹಿಸಬೇಕೆಂದರು

ಈ ಸಂದರ್ಭದಲ್ಲಿ ಶಾರದಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಿ.ಬಿ. ನದಾಫ, ಆರ್.ಎಮ್. ಸನದಿ, ಮೆಹಬೂಬ ಕರಿಸಾಬು, ದೈಹಿಕ ಶಿಕ್ಷಣಾಧಿಕಾರಿ ಎಸ್.ಬಿ. ಕರೋಶಿ, ಎಲ್.ಬಿ. ನಾಯಿಕ, ದನಪಾಲ ಹಳ್ಳೂರ, ಲಕ್ಷ್ಮಣ ಜಯಗೋಣಿ, ಅಶೋಕ ಐಗಳಿ, ವಿಪುಲ್ ಪಂಡಿತ, ಆರ್.ಎ. ಪಾಟೀಲ, ದರೇಪ್ಪ ಚುನಾರ, ರಾಮು ಕುಂಬಾರ, ಅಪ್ಪಾಸಾಬ ಕಾಂಬಳೆ, ಶಿಕ್ಷಕರಾದ ಮಹಾಂತೇಶ ಘೂಳಪ್ಪನ್ನವರ, ಮಹಾದೇವ ಬಿಸ್ವಾಗರ, ಸೇರಿದಂತೆ ದರೂರ ಕ್ಲಸ್ಟರ್ ಮಟ್ಟದ ವಿವಿಧ ಶಾಲೆಗಳ ದೈಹಿಕ ಶಿಕ್ಷಣ ಶಿಕ್ಷಕರು, ಮುಖ್ಯೋಪಾಧ್ಯಾಯರು, ಎಸ್‌ಡಿಎಂಸಿ ಸದಸ್ಯರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಇಂಡಿ–ಚಡಚಣ ಕೈಬಿಟ್ಟಿರುವುದು ರೈತರಿಗೆ ಮಾಡಿದ ದ್ರೋಹ!

■ ಉದಯರಶ್ಮಿ ದಿನಪತ್ರಿಕೆ



**ನಾಗಠಾಣ ಮತಕ್ಷೇತ್ರ ಬರಪೀಡಿತ ಪ್ರದೇಶವೆಂದು ಘೋಷಿಸಲು ಆಗ್ರಹ । ಮಾಜಿ ಶಾಸಕ ದೇವಾನಂದ ಚವ್ಹಾಣ ಆರೋಪ**

ಚಡಚಣ: ವಿಜಯಪುರ ಜಿಲ್ಲೆಯ ಚಡಚಣ ತಾಲ್ಲೂಕು ಸೇರಿದಂತೆ ನಾಗಠಾಣ ಮತಕ್ಷೇತ್ರದ ಬಹುತೇಕ ಗ್ರಾಮಗಳು ತೀವ್ರ ಮಳೆ ಕೊರತೆಯಿಂದ ಬರದ ಛಾಯೆಯಲ್ಲಿವೆ. ಆದರೆ ಜಿಲ್ಲೆಯ 13 ತಾಲ್ಲೂಕುಗಳ ಪೈಕಿ ಕೇವಲ ಮೂರು ತಾಲ್ಲೂಕುಗಳನ್ನು ಬರಪೀಡಿತವೆಂದು ಸರ್ಕಾರ ಘೋಷಿಸಿರುವುದು ಈ ಭಾಗದ ರೈತರಿಗೆ ಮಾಡಿದ ಅನ್ಯಾಯವಾಗಿದೆ. ಕೂಡಲೇ ಸಮಗ್ರ ನಾಗಠಾಣ ಮತಕ್ಷೇತ್ರವನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿ ಅಗತ್ಯ ಪರಿಹಾರೋಪಾಯಗಳನ್ನು ಕೈಗೊಳ್ಳಬೇಕು ಎಂದು ನಾಗಠಾಣ ಮತಕ್ಷೇತ್ರದ ಮಾಜಿ ಶಾಸಕ ದೇವಾನಂದ ಚವ್ಹಾಣ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ವಿಜಯಪುರ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಬರದ ಪರಿಸ್ಥಿತಿನಿರ್ಮಾಣವಾಗಿದ್ದರೂಕೇವಲವಿಜಯಪುರ, ನಿಡಗುಂದಿ ಹಾಗೂ ಕೊಲ್ಹಾರ ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಿರುವುದು ಸರಿಯಲ್ಲ. ಸತತ ಬರಗಾಲದಿಂದ ತತ್ತರಿಸುತ್ತಿರುವ ಇಂಡಿ ಹಾಗೂ ಚಡಚಣ ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳ ಪಟ್ಟಿಯಿಂದ ಕೈಬಿಟ್ಟಿರುವುದು ರೈತರಿಗೆ ಮಾಡಿದ ಬಹುದೊಡ್ಡ ದ್ರೋಹವಾಗಿದೆ ಎಂದು ಆರೋಪಿಸಿದ್ದಾರೆ.

ಚಡಚಣ ಸೇರಿದಂತೆ ನಾಗಠಾಣ ಮತಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಶೇ.80ಕ್ಕಿಂತ ಹೆಚ್ಚು ಮಳೆ ಕೊರತೆಯಾಗಿದೆ ಎಂದು ಕೃಷಿ ಇಲಾಖೆಯ ಅಧಿಕಾರಿಗಳೇ ತಿಳಿಸಿದ್ದಾರೆ. ಸಮರ್ಪಕ ಮಳೆಯಾಗದ ಹಿನ್ನೆಲೆಯಲ್ಲಿ ರೈತರು ಬಿತ್ತನೆ ಮಾಡಿರುವ ಬೆಳೆಗಳು ಒಣಗಿ ನಾಶವಾಗುವ ಹಂತ ತಲುಪಿವೆ. ಕೃಷಿ ಚಟುವಟಿಕೆಗಳಿಗೆ ತೀವ್ರ ಹಿನ್ನಡೆಯಾಗಿದ್ದು, ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಇನ್ನೊಂದೆಡೆ ಜಾನುವಾರುಗಳಿಗೆ ಅಗತ್ಯ ಪ್ರಮಾಣದ ಮೇವು ಹಾಗೂ ಕುಡಿಯುವ ನೀರು ದೊರೆಯದ ಪರಿಸ್ಥಿತಿ ನಿರ್ಮಾಣವಾಗಿದೆ. ಸಾಲಸೂಲ ಮಾಡಿ ಬಿತ್ತನೆ ಮಾಡಿರುವ ರೈತರು ಬೆಳೆ ಕೈಕೊಡುವ ಆತಂಕದಲ್ಲಿದ್ದಾರೆ. ಮಳೆ ಕೊರತೆ ಇದೇ ರೀತಿ ಮುಂದುವರಿದರೆ ರೈತರು ಹಾಗೂ ಕೃಷಿ ಕೂಲಿ ಕಾರ್ಮಿಕರು ಉದ್ಯೋಗ ಅರಸಿ ಗುಳೆ ಹೋಗುವ ಪರಿಸ್ಥಿತಿ ಎದುರಾಗಲಿದೆ ಎಂದು ದೇವಾನಂದ ಚವ್ಹಾಣ ಕಳವಳ ವ್ಯಕ್ತಪಡಿಸಿದ್ದಾರೆ.

ಜಿಲ್ಲಾಧಿಕಾರಿಗಳು ಹಾಗೂ ಈ ಭಾಗದ ಜನಪ್ರತಿನಿಧಿಗಳು ಕೂಡಲೇ ಬರ ಪರಿಸ್ಥಿತಿಯ ಬಗ್ಗೆ ಗಂಭೀರವಾಗಿ ಗಮನಹರಿಸಬೇಕು. ಗ್ರಾಮವಾರು ಸಮಗ್ರ ಸಮೀಕ್ಷೆ ನಡೆಸಿ ಬೆಳೆ ಹಾನಿಯ ವಾಸ್ತವಿಕ ವರದಿ ಸಿದ್ಧಪಡಿಸಬೇಕು. ಜಾನುವಾರುಗಳಿಗೆ ಮೇವು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ ಸಂಕಷ್ಟದಲ್ಲಿರುವ ರೈತರಿಗೆ ಸರ್ಕಾರದ ಬರ ಪರಿಹಾರ ಹಾಗೂ ಅಗತ್ಯ ಆರ್ಥಿಕ ನೆರವು ಒದಗಿಸಬೇಕು.ರೈತರ ಸಂಕಷ್ಟವನ್ನು ಕೇವಲ ಅಂಕಿ–ಅಂಶಗಳ ಮೂಲಕ ನೋಡದೆ ಮಾನವೀಯ ದೃಷ್ಟಿಕೋನದಿಂದ ಪರಿಗಣಿಸಿ, ಸಮಗ್ರ ನಾಗಠಾಣ ಮತಕ್ಷೇತ್ರವನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿ ತಕ್ಷಣ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ದೇವಾನಂದ ಚವ್ಹಾಣ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

# ಬಡವರ ಹಿತಕ್ಕೆ ಪ್ರಾಮುಖ್ಯತೆ ನೀಡುವ ವಿಬಿಜಿರಾಮ್–ಜೀ ಯೋಜನೆ

## ಹುಣಶ್ಯಾಳದಲ್ಲಿ ವಿಬಿಜಿರಾಮ್-ಜೀ ಯೋಜನೆಯಡಿಯ ಕೆರೆ ಅಭಿವೃದ್ಧಿ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ಸಂಸದ ರಮೇಶ ಜಿಗಜಿಣಗಿ ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕೂಲಿಕಾರರ ಹಿತರಕ್ಷಣೆಯ ದೃಷ್ಟಿಯಿಂದ ಅವರು ದುಡಿದ ಹಣ ನೇರವಾಗಿ ತಲುಪಲಿ ಎಂದು ಪಾರದರ್ಶಕ ವ್ಯವಸ್ಥೆಯನ್ನು ಪ್ರಧಾನಿ ಮೋದಿ ಅವರು ರೂಪಿಸಿದ್ದಾರೆ, ಎಷ್ಟೇ ವಿರೋಧ ವ್ಯಕ್ತವಾದರೂ ಬಡವರ ಹಿತಕ್ಕೆ ಪ್ರಾಮುಖ್ಯತೆ ನೀಡಿ ವಿಬಿಜಿರಾಮ್–ಜೀ ಯೋಜನೆಯನ್ನು ಅನುಷ್ಠಾನಗೊಳಿಸಿದ್ದಾರೆ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದರು.

ನಾಗಠಾಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುಣಶ್ಯಾಳ ಗ್ರಾಮದಲ್ಲಿ ವಿಬಿಜಿರಾಮ್–ಜೀ ಯೋಜನೆಯಡಿಯಲ್ಲಿ ನಡೆಯುತ್ತಿರುವ ಕೆರೆ ಅಭಿವೃದ್ಧಿ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಾರ್ಮಿಕರೊಂದಿಗೆ ಸಂವಾದ ನಡೆಸಿದ ಜಿಗಜಿಣಗಿ, ಈ ಮುಂದೆ ನೀವು ದುಡಿದ ಹಣ ನೇರವಾಗಿ ದೊರಕುತ್ತಿರಲಿಲ್ಲ, ಹೀಗಾಗಿಯೇ ಪ್ರಧಾನಿ ಮೋದಿ ಅವರು ಈ ಹಿಂದಿನ ಯೋಜನೆಯನ್ನು ಮಾರ್ಪಾಡು ಮಾಡಿ ನೇರವಾಗಿ ನಿಮಗೆ ಹಣ ದೊರಕಿಸುವಂತೆ ಮಾಡುವ ಮೂಲಕ ನ್ಯಾಯ ಒದಗಿಸುವ ಕಾರ್ಯ ಮಾಡಿದ್ದಾರೆ, ಕಾರ್ಮಿಕರಿಗೆ ನೇರವಾಗಿ ಹಣ ವರ್ಗಾವಣೆ ಬೇಡ ಎಂದು ಅನೇಕ ಶಕ್ತಿಗಳು ವಿರೋಧ ವ್ಯಕ್ತಪಡಿಸಿದವು, ಆದರೆ ಕೂಲಿಕಾರ್ಮಿಕರ ಬಗ್ಗೆ ಅಪಾರ ಕಾಳಜಿ ಇರುವ ನಮ್ಮ ಪ್ರಧಾನಿ ಮೋದಿ ಅವರು ಎಲ್ಲ ವಿರೋಧವನ್ನು ಲೆಕ್ಕಿಸದೇ ಈ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಿದರು ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಸಂಜು ಐಹೊಳೆ, ಮಾಜಿ ಜಿಪಂ ಸದಸ್ಯ ನವೀನ್ ಅರಿಕೇರಿ, ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ್, ಮಹಾನಗರ ಪಾಲಿಕೆಯ ಸದಸ್ಯ ಮಲ್ಲನಗೌಡ ಪಾಟೀಲ್, ವಿಜಯ ಜೋಶಿ, ಉದಯ ಕನ್ನಳ್ಳಿ, ರವಿ ಬಿರಾದಾರ, ಕಾರ್ಯನಿರ್ವಾಹಕ ಅಧಿಕಾರಿ ಗುರುಶಾಂತಪ್ಪ ಬೆಳ್ಳುಂಡಗಿ, ಪಿಡಿಓಗಳಾದ ಎಸ್ ಆರ್ ಕಟ್ಟಿ, ನಾಮದೇವ್ ಸಿಂಧಿ, ವಿಜಯಲಕ್ಷ್ಮಿ ಹಿಟ್ನಳ್ಳಿ ಸೇರಿದಂತೆ ಹಲವರಿದ್ದರು.

# ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ತಗಡೂರಗೆ ಕೆಯುಡಬ್ಲ್ಯೂಜೆ ಅಭಿನಂದನೆ

■ ಉದಯರಶ್ಮಿ ದಿನಪತ್ರಿಕೆ




ಬೆಂಗಳೂರು: ನಾಟಕ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿರುವ ರಂಗಕರ್ಮಿ ಹಾಗೂ ಹಿರಿಯ ಪತ್ರಕರ್ತ ಶಿವಾನಂದ ತಗಡೂರು ಅವರನ್ನು ಹತ್ತು ಸಾವಿರ ಪತ್ರಕರ್ತರ ಸಾಂಘಿಕ ಶಕ್ತಿಯಾಗಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಏಗಘಎ) ಭಾವಪೂರ್ಣವಾಗಿ ಅಭಿನಂದಿಸಿತು.

**ಬೆಂಗಳೂರಿನಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಶಿವಾನಂದ ತಗಡೂರು ಅವರಿಗೆ ಅಭಿನಂದನೆಗಳ ಮಹಾಪೂರ**

ಸೋಮವಾರ ನಗರದ ಕಂದಾಯ ಭವನದಲ್ಲಿರುವ ಡಿವಿಜಿ ಸಭಾಂಗಣದಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಶಿವಾನಂದ ತಗಡೂರು ಅವರಿಗೆ ಅಭಿನಂದನೆ ಸಲ್ಲಿಸುವುದರ ಜೊತೆಗೆ, ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದ ಕರ್ನಾಟಕ ನಾಟಕ ಅಕಾಡೆಮಿಗೂ ಅಭಿನಂದನೆ ಸೂಚಿಸುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಬಳಿಕ ನಡೆದ ಅಭಿನಂದನಾ ಸಮಾರಂಭದಲ್ಲಿ ಹಿರಿಯ ಪತ್ರಕರ್ತ ಎನ್. ರವಿಕುಮಾರ್ (ಟೆಲೆಕ್ಸ್) ಮಾತನಾಡಿ, "ಶಿವಾನಂದ ತಗಡೂರು ಅವರನ್ನು ಬಹುತೇಕರು ಪತ್ರಕರ್ತರಾಗಿ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾಗಿ ಮಾತ್ರ ಗುರುತಿಸುತ್ತಾರೆ. ಆದರೆ ಅವರೊಳಗೆ ಬದುಕಿರುವ ಸಮರ್ಪಿತ ರಂಗಕಲಾವಿದನನ್ನು ಅಷ್ಟಾಗಿ ಅರಿತಿಲ್ಲ," ಎಂದು ಹೇಳಿದರು.

ಪರದೆ ಮುಂದೆ ಮತ್ತು ಪರದೆ ಹಿಂದೆ ಸಮಾನವಾಗಿ ದುಡಿದಿರುವ ಶಿವಾನಂದ ತಗಡೂರು ಬಹುಮುಖ ಪ್ರತಿಭೆಯ ವ್ಯಕ್ತಿತ್ವ ಹೊಂದಿದ್ದಾರೆ. ತಮ್ಮ ಪ್ರತಿಭೆಯನ್ನು ಸಮಾಜದ ಒಳಿತಿಗೆ ಮುಡುಪಾಗಿಟ್ಟಿರುವ ಅವರ ಬದುಕು ರಂಗಭೂಮಿಯ ಮೇಲಿನ ಬದ್ಧತೆ, ನಿಷ್ಠೆ ಮತ್ತು ಸೇವೆಯ ಪ್ರತೀಕವಾಗಿದೆ. ಇಂತಹ ಸೇವೆಯನ್ನು ಗುರುತಿಸಿ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿರುವುದು ಅತ್ಯಂತ ಸಾರ್ಥಕವಾಗಿದೆ ಎಂದು ಎನ್.ರವಿಕುಮಾರ್ ಅಭಿಪ್ರಾಯಪಟ್ಟರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯ ಪತ್ರಕರ್ತರು ಶಿವಾನಂದ ತಗಡೂರು ಅವರನ್ನು ಅಭಿನಂದಿಸಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಏಗಘಎ ಹಿರಿಯ ಉಪಾಧ್ಯಕ್ಷ ಹೆಚ್. ಬಿ. ಮದನಗೌಡ ಮಾತನಾಡಿ, ಎಂದೋ ಬರಬೇಕಾಗಿದ್ದ ಪ್ರಶಸ್ತಿ ಇಂದು ಬಂದಿದೆ. ಇದು ಸಂಘಕ್ಕೊಂದು ಗರಿಮೆ ಎಂದರು.

ರಾಜ್ಯ ಉಪಾಧ್ಯಕ್ಷರಾದ ಮತ್ತಿಕೆರೆ ಜಯರಾಮ್ , ರಮೇಶ್ ಅಜ್ಜಮಾಡ ಕುಟ್ಟಪ್ಪ, ಪ್ರಧಾನ ಕಾರ್ಯದರ್ಶಿ ಜಿ. ಸಿ. ಲೋಕೇಶ, ಕಾರ್ಯದರ್ಶಿಗಳಾದ ಸೋಮಶೇಖರ ಕೆರಗೋಡು, ನಿಂಗಪ್ಪ ಚಾವಡಿ, ಪುಂಡಲೀಕ ಬಾಳೋಜಿ, ಖಜಾಂಚಿ ವಾಸುದೇವ ಹೊಳ್ಳ ಸೇರಿದಂತೆ ರಾಜ್ಯ ಕಾರ್ಯಕಾರಿಣಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಸರ್ವಧರ್ಮಗಳ ಸಮನ್ವಯತೆಯೇ ಭಾವೈಕ್ಯತೆ: ಗದ್ದುಗೆ

■ ಉದಯರಶ್ಮಿ ದಿನಪತ್ರಿಕೆ



ಕೆಂಭಾವಿ: ಭಾರತೀಯ ಕನ್ನಡಿಗರಾಗಿ ಭಾವೈಕ್ಯತೆಯ ಭಾವದಿಂದ ಸಾಧು ಸಂತ ಶರಣರ ಫಕೀರಾಧಿಯಾಗಿ ಎಲ್ಲ ಧರ್ಮಗಳ ಪ್ರೀತಿಸುವುದರ ಮೂಲಕ ಕನ್ನಡ ನಾಡಿನ ಸಾಂಸ್ಕೃತಿಕ ಹಿರಿಮೆಯನ್ನು ಉಳಿಸುವ ಸೇವಕರಾಗೋಣ ಎಂದು ಶಹಪೂರದ ಚರಬಸವೇಶ್ವರ ಸಂಸ್ಥಾನದ ಡಾ.ಶರಣು. ಬಿ ಗದ್ದುಗೆ ಹೇಳಿದರು.

ಪಟ್ಟಣದ ಆರಾಧ್ಯ ದೈವ ಹಜರತ್ ಜಚ್ಚಾ ಮಾಸಾಬಿಯ 529 ನೇ ಜಾತ್ರಾ ಮಹೋತ್ಸವ ಅಂಗವಾಗಿ ಮಂಗಳವಾರ ಹಮ್ಮಿಕೊಂಡ ಸರ್ವ ಧರ್ಮ ಸಮ್ಮೇಳನ ಹಾಗೂ ಖಾಸಗಿ ಶಾಲಾ ಶಿಕ್ಷಕರಿಗೆ ಆದರ್ಶ ಶಿಕ್ಷಕ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಗರನಾಡಿಗೆ ಒಳ್ಳೆಯ ಕಲ್ಪನೆ ಇದೆ. ಸಮ ಸಮಾಜಕ್ಕಾಗಿ ಬಸವ ಪೂರ್ವ ಯುಗದಲ್ಲಿ ಹೋರಾಟದ ಕಿಚ್ಚು ಹಚ್ಚಿದ ಭೋಗಣ್ಣನ, ಭಾವೈಕ್ಯತೆ ಕೇಂದ್ರಬಿಂದು ಮಹಾ ಸತಿ ಮಾಸಾಬಿ ನೆಲೆಸಿದ ಪುಣ್ಯ ಭೂಮಿ ಕೆಂಭಾವಿ ಕನ್ನಡ ನಾಡಿಗೆ ಭಾವೈಕ್ಯತೆ ಸಂದೇಶ ಕೊಡುತ್ತಿದೆ, ಕೆಲವು ಸಂದರ್ಭಗಳಲ್ಲಿ ದುಷ್ಟ ಶಕ್ತಿಗಳಿಂದ ಸಮುದಾಯಕ್ಕೆ ಕೆಟ್ಟ ಹೆಸರು ಬರುತ್ತದೆ ಆದರೆ ಸಹ ಬಾಳ್ವೆಯ ಬೀಜ ಬಿತ್ತಲು ಇಂತ ಸಮಾರಂಭಗಳು ನಡೆಯಬೇಕು. ಅನ್ಯ ದರ್ಮವನ್ನು ಪ್ರೀತಿಸುವುದೆ ಬಾವೈಕ್ಯತೆಯಾಗಿದೆ ಎಂದರು.

ನಿವೃತ್ತ ಪ್ರಾಂಶುಪಾಲ ನರಸಿಂಹರಾವ್ ಕುಲ್ಕರ್ಣಿ ಮಾತನಾಡಿ, ಪಟ್ಟಣ ಆರಾಧ್ಯ ದೈವ ಮಾಸಾಬಿ ಹಿಂದುಗಳಿಗೆ ಮಹಾಸತ್ಯಮ್ಮಳಾಗಿ ಮುಸ್ಲಿಮರಿಗೆ ಮಾಸಾಬಿಯಾಗಿ ಸರ್ವರಿಂದಲೂ ಆರಾಧಿಸಲ್ಪಡುವ ಗ್ರಾಮ ದೇವತೆಯಾಗಿದ್ದಾಳೆ ಎಂದರು. ಮಹ್ಮದ್ ಆದಮ್ ಖಾಜಿ ಪ್ರಾಸ್ತಾವಿಕ ಮಾತನಾಡಿದರು. ಅಧ್ಯಕ್ಷತೆಯನ್ನು ಹಿರಿಯ ಸಾಹಿತಿ ಲಿಂಗನಗೌಡ ಮಾಲಿ ಪಾಟೀಲ್ ವಹಿಸಿ ಮಾತನಾಡಿದರು. ಹಜರತ್ ಷಾ ಬಹಿಬೂಬ್ ಪಾಷಾ ಖಾಜಿ ಫಾರೂಖಿ ಹಾಗೂ ಚನ್ನಯ್ಯ ಸ್ವಾಮಿ ಚಿಕ್ಕಮಠ ಸಾನಿಧ್ಯ ವಹಿಸಿದ್ದರು.

ಸಮ್ಮುಖ ಹಜರತ್ ಮಜರುದ್ದಿನ ಖಾಜಿ, ಆದಿತ್ಯಗೌಡ ಪೊ.ಪಾಟೀಲ, ಅಶೋಕ ಸಾಹು ಸೊನ್ನದ, ಕೃಷ್ಣಯ್ಯ ಗುತ್ತೇದಾರ್, ರಮೇಶ ಆರ್ ಕೊಡಗಾನೂರ ಇದ್ದರು.

ಫಜಲುದ್ದಿನ ಖಾಜಿ ಖುರಾನ್ ಸಂಸ್ಕೃತದಲ್ಲಿ ಪಠಣ ಮಾಡಿ ವಚನ ಗಾಯನದೊಂದಿಗೆ ಪ್ರಾರ್ಥನೆ ಸಲ್ಲಿಸಿದರು. ತಾಹೀರ ಪಾಶಾ ಖಾಜಿ ನಿರೂಪಿಸಿದರು. ಸಮ್ಮೇಳನದಲ್ಲಿ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಎಲ್ಲಾ ಸಮುದಾಯದ ಭಕ್ತರು ಭಾಗವಹಿಸಿದ್ದರು

## ಆದರ್ಶ ಶಿಕ್ಷಕ ರತ್ನ ಪ್ರಶಸ್ತಿ ಪ್ರದಾನ

ಇದೇ ವೇಳೆ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಖಾಸಗಿ ಶಾಲಾ ಶಿಕ್ಷಕರಾದ ರಾಮಕೃಷ್ಣ ಹುಜರತ್ತಿ, ಸಾನಿಯಾ ಗುಲಾಮ್ ರಬ್ಬಾನಿ ನಾಲ್ತವಾಡ, ಸಂತೋಷ ರಾಠೋಡ್, ಮೀನಾಕ್ಷಿ ಸಂಗನಗೌಡ, ಭಾರತಿ ಎಮ್ ಜೆ, ಅಂಬಿಕಾ ನಿಂಗರಾಜ್, ಸುರೇಶ ಕಲ್ಲದೇವನಳ್ಳಿ, ಲತಾ ಆರ್ ಕೊಣ್ಣೂರು, ಲಕ್ಷ್ಮಿ ಶರಣು, ಭಾಗ್ಯಶ್ರೀ ಗುತ್ತೇದಾರ, ಮಡಿವಾಳಪ್ಪ ಬಿರೇದಾರ, ಕಸ್ತೂರಿ ಪ್ರಶಾಂತ, ಬಸನಗೌಡ ಮಾಲಿ ಪಾಟೀಲ್, ಮುಮ್ತಾಜ್ ಬೇಗಂ ರವರಿಗೆ ಆದರ್ಶ ಶಿಕ್ಷಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

# ಎಸ್‌ಐಆರ್: ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಕೆಗೆ ಸೆ.23 ಕೊನೆಯ ದಿನ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲೆಯಲ್ಲಿ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ–2026 (ಎಸ್‌ಐಆರ್) ಪ್ರಕ್ರಿಯೆ ಪ್ರಸ್ತುತ ಚಾಲ್ತಿಯಲ್ಲಿದ್ದು, ಅರ್ಹ ಮತದಾರರು ತಮ್ಮ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಸೆಪ್ಟೆಂಬರ್ 23ರವರೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಡಾ. ಆನಂದ್ ಕೆ. ಅವರು ತಿಳಿಸಿದ್ದಾರೆ.

ಅರ್ಹ ಮತದಾರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲು ನಮೂನೆ–6, ಅನಿವಾಸಿ ಭಾರತೀಯ ಮತದಾರರ ಹೆಸರು ಸೇರ್ಪಡೆಗೆ ನಮೂನೆ–6ಎ, ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕಲು ನಮೂನೆ–7 ಹಾಗೂ ವಿಳಾಸ ಬದಲಾವಣೆ, ಹೆಸರು ಅಥವಾ ಇತರೆ ವಿವರಗಳ ತಿದ್ದುಪಡಿಗಾಗಿ ನಮೂನೆ–8ರ ಮೂಲಕ ಅರ್ಜಿ ಅಥವಾ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯ ಭಾಗವಾಗಿ ಮತದಾರ ನೋಂದಣಾಧಿಕಾರಿ ಹಾಗೂ ಸಹಾಯಕ ಮತದಾರ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಸ್ವೀಕರಿಸಲಾದ ಅರ್ಜಿ ಮತ್ತು ಆಕ್ಷೇಪಣೆಗಳಿಗೆ ಸಂಬಂಧಿಸಿದ ಪಟ್ಟಿಗಳನ್ನು ನಮೂನೆ–9, 10, 11, 11ಎ ಹಾಗೂ 11ಬಿಗಳಲ್ಲಿ ಈಗಾಗಲೇ ಪ್ರಕಟಿಸಲಾಗಿದೆ.

ಸಾರ್ವಜನಿಕರು ಈ ಪಟ್ಟಿಗಳನ್ನು ಪರಿಶೀಲಿಸಿ, ತಮ್ಮ ಹೆಸರು ಹಾಗೂ ಸಂಬಂಧಿತ ವಿವರಗಳನ್ನು ಖಚಿತಪಡಿಸಿಕೊಳ್ಳಬಹುದಾಗಿದೆ.

ಮಾಹಿತಿಯನ್ನು ಜಿಲ್ಲಾಡಳಿತದ ಅಧಿಕೃತ ವೆಬ್‌ಸೈಟ್ https://vijayapura.nic.in/en/ ಮತ್ತು ನಿಗದಿತ ಗೂಗಲ್‌ಡ್ರೈವ್‌ನಲ್ಲಿ https://drive.google.com/drive/folders/1dx1u7895au_CL3JH-LYAZ4_BYOy7ake5S?usp=sharing ನಲ್ಲಿಯೂ ಸಹ ಪರಿಶೀಲಿಸಬಹುದಾಗಿದೆ.

ಜಿಲ್ಲೆಯ ಅರ್ಹ ಮತದಾರರು ಹಾಗೂ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಪ್ರಕಟಿಸಲಾದ ಅರ್ಜಿ ಮತ್ತು ಆಕ್ಷೇಪಣೆಗಳ ಪಟ್ಟಿಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ನಿಗದಿತ ಅವಧಿಯೊಳಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಮೂಲಕ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR